ಸಂಪುಟ 01 | ಸಂಚಿಕೆ 207 ಗುರುವಾರ 01 ಅಕ್ಟೋಬರ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

ನೈಜ್ಯ ದೆಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

ಈ ದಿನದ ವಿಶೇಷ

1)ವಯೋವೃದ್ಧರ ಅಂತರರಾಷ್ಟ್ರೀಯ ದಿನ (International Day of Older Persons) ಹಿರಿಯ ನಾಗರಿಕರ ಹಕ್ಕುಗಳು, ಗೌರವ ಮತ್ತು ಸಮಾಜಕ್ಕೆ ಅವರ ಕೊಡುಗೆಯನ್ನು ಗೌರವಿಸುವ ದಿನ.

2)ಅಂತರರಾಷ್ಟ್ರೀಯ ಕಾಫಿ ದಿನ (International Coffee Day) ಕಾಫಿ ಕ್ಷೇತ್ರ, ರೈತರು ಮತ್ತು ಕಾಫಿ ಉತ್ಪಾದನೆಯ ಸಾಮಾಜಿಕ ಆರ್ಥಿಕ ಮಹತ್ವದ ಬಗ್ಗೆ ಜಾಗೃತಿ ಮೂಡಿಸುವ ದಿನ.

3)ವಿಶ್ವ ಸಸ್ಯಾಹಾರ ದಿನ (World Vegetarian Day) ಸಸ್ಯಾಹಾರ ಜೀವನಶೈಲಿಯ ಬಗ್ಗೆ ಅರಿವು ಮೂಡಿಸುವ ದಿನ.

ಸುಭಾಷಿತ

ಸಂಸ್ಕೃತಿಯೆಂದರೆ ಮನುಷ್ಯರ ಅನ್ಯೋನ್ಯ
ಸಂಬಂಧಗಳಲ್ಲಿ ನಯವಿನಯಗಳ ಸೊಬಗು,
ಸ್ವಗುಣ ಪರಗುಣಗಳ ಸಮ್ಮಿಶ್ರಿತ ಕಾಂತಿ.

ಡಿ.ವಿ. ಗುಂಡಪ್ಪ

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

ಸಿಂಧನೂರಿನಲ್ಲಿ ಅ.11ರಂದು CIO ರಾಷ್ಟ್ರೀಯ ವಿಜ್ಞಾನ ಒಲಿಂಪಿಯಾಡ್-2026


ಇಕ್ರಾ ಶಾಲೆಯಲ್ಲಿ ವಿಜ್ಞಾನಾಸಕ್ತ ವಿದ್ಯಾರ್ಥಿಗಳಿಗೆ ರಾಷ್ಟ್ರಮಟ್ಟದ ಸ್ಪರ್ಧೆಗೆ ವೇದಿಕೆ

❑ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಜಮಾತೆ ಇಸ್ಲಾಮಿ ಹಿಂದ್ ಸಿಂಧನೂರು ಸಂಘಟನೆಯ ಸಹಯೋಗದಲ್ಲಿ, ಅಋಔ ಅಧ್ಯಕ್ಷರಾದ ರಿಜ್ವಾನ ಬೇಗಮ್ ಅವರ ಮಾರ್ಗದರ್ಶನದಲ್ಲಿ ಅಋಔ ರಾಷ್ಟ್ರೀಯ ವಿಜ್ಞಾನ ಒಲಿಂಪಿಯಾಡ್?2026 ಅನ್ನು ಅಕ್ಟೋಬರ್ 11ರಂದು ಸಿಂಧನೂ-ರಿನ ಮೆಹಬೂಬ್ ಕಾಲೋನಿಯಲ್ಲಿರುವ ಇಕ್ರಾ ಸ್ಕೂಲ್‌ನಲ್ಲಿ ಆಯೋಜಿಸಲಾಗಿದೆ.

ನವದೆಹಲಿಯ ಚಿಲ್ಡ್ರನ್ ಇಸ್ಲಾಮಿಕ್ ಆರ್ಗನೈಸೇಶನ್ (ಅಋಔ) ವತಿಯಿಂದ ಆಯೋಜಿಸಲಾಗುತ್ತಿರುವ ಈ ವಿಜ್ಞಾನ ಒಲಿಂಪಿಯಾಡ್‌ನ ಮುಖ್ಯ ಉದ್ದೇಶ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಕುತೂಹಲ, ವಿಮರ್ಶಾತ್ಮಕ ಚಿಂತನೆ, ವೈಜ್ಞಾನಿಕ ವಿಚಾರಣೆ, ವೀಕ್ಷಣಾ ಸಾಮರ್ಥ್ಯ ಹಾಗೂ ಪುರಾವೆ ಆಧಾರಿತ ತಾರ್ಕಿಕತೆಯನ್ನು ಬೆಳೆಸುವುದಾಗಿದೆ.

"ಯೋಚಿಸಿ, ಅನ್ವೇಷಿಸಿ, ಅರಿತುಕೊಳ್ಳಿ" ಎಂಬ ಆಶಯದೊಂದಿಗೆ ನಡೆಯಲಿರುವ ಈ ಒಲಿಂಪಿಯಾಡ್, ವಿದ್ಯಾರ್ಥಿಗಳ ಪಠ್ಯಪುಸ್ತಕ ಜ್ಞಾನವನ್ನು ಮಾತ್ರ ಪರೀಕ್ಷಿಸುವುದಕ್ಕಿಂತಲೂ ನೈಜ ಜೀವನದ ವೈಜ್ಞಾನಿಕ ಸನ್ನಿವೇಶಗಳನ್ನು ಅರ್ಥೈಸುವ ಹಾಗೂ ಸಮಸ್ಯೆಗಳಿಗೆ ತಾರ್ಕಿಕವಾಗಿ ಪರಿಹಾರ ಕಂಡುಕೊಳ್ಳುವ ಸಾಮರ್ಥ್ಯಕ್ಕೆ ಹೆಚ್ಚಿನ ಒತ್ತು ನೀಡಲಿದೆ. 6ರಿಂದ 8ನೇ ತರಗತಿ ವಿದ್ಯಾರ್ಥಿಗಳಿಗೆ ಅವಕಾಶ ಈ ರಾಷ್ಟ್ರೀಯ ವಿಜ್ಞಾನ ಒಲಿಂಪಿಯಾಡ್‌ನಲ್ಲಿ 6ನೇ, 7ನೇ ಹಾಗೂ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಭಾಗವಹಿಸಬಹುದಾಗಿದೆ. ಭಾರತದಾದ್ಯಂತ ವಿದ್ಯಾರ್ಥಿಗಳಿಗೆ ಮುಕ್ತವಾಗಿರುವ ಈ ಸ್ಪರ್ಧೆಯಲ್ಲಿ ಸಿಂಧನೂರು ಭಾಗದ ವಿದ್ಯಾರ್ಥಿಗಳೂ ಭಾಗವಹಿಸಿ ತಮ್ಮ ವೈಜ್ಞಾನಿಕ ಪ್ರತಿಭೆಯನ್ನು ಪ್ರದರ್ಶಿಸಲು ಅವಕಾಶ ಕಲ್ಪಿಸಲಾಗಿದೆ. ಒಲಿಂಪಿಯಾಡ್‌ನ



ಪ್ರಶ್ನೆಪತ್ರಿಕೆಗಳು ಇತ್ತೀಚಿನ ಓಅಇಖಖಿ ವಿಜ್ಞಾನ ಪಠ್ಯಕ್ರಮವನ್ನು ಆಧರಿಸಿ ಪ್ರತ್ಯೇಕವಾಗಿ 6, 7 ಮತ್ತು 8ನೇ ತರಗತಿಗಳಿಗೆ ಸಿದ್ಧಪಡಿಸಲಾಗಿದ್ದು, ವಿದ್ಯಾರ್ಥಿಗಳ ಪರಿಕಲ್ಪನಾ ಜ್ಞಾನ, ವೈಜ್ಞಾನಿಕ ತರ್ಕ ಹಾಗೂ ಉನ್ನತ ಮಟ್ಟದ ಚಿಂತನಾ ಸಾಮರ್ಥ್ಯವನ್ನು ಪರೀಕ್ಷಿಸುವ ರೀತಿಯಲ್ಲಿ ಪ್ರಶ್ನೆಗಳನ್ನು ರೂಪಿಸಲಾಗಿದೆ. ವಿಜ್ಞಾನದ ವಿವಿಧ ವಿಭಾಗಗಳ ಕುರಿತು ಪ್ರಶ್ನೆಗಳು ಒಲಿಂಪಿಯಾಡ್‌ನಲ್ಲಿ ಪರಿಸರ ವಿಜ್ಞಾನ, ಜೀವಶಾಸ್ತ್ರ, ರಸಾಯನಶಾಸ್ತ್ರ ಹಾಗೂ ಭೌತಶಾಸ್ತ್ರ ಸೇರಿದಂತೆ ವಿಜ್ಞಾನದ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದ ಪ್ರಶ್ನೆಗಳು ಇರಲಿವೆ. ಪರಿಕಲ್ಪನೆ ಆಧಾರಿತ ಪ್ರಶ್ನೆಗಳು, ಪ್ರಕರಣ ಅಧ್ಯಯನಗಳು, ವೀಕ್ಷಣೆ ಮತ್ತು ತನಿಖೆ, ರೇಖಾಚಿತ್ರಗಳ ವ್ಯಾಖ್ಯಾನ, ವೈಜ್ಞಾನಿಕ ತರ್ಕ ಹಾಗೂ ಪ್ರಾಯೋಗಿಕ ಚಿಂತನೆಗೆ ಸಂಬಂಧಿಸಿದ ಪ್ರಶ್ನೆಗಳು ಸ್ಪರ್ಧೆಯ ಪ್ರಮುಖ ಭಾಗವಾಗಿರಲಿವೆ. ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುವ ಪ್ರಯತ್ನ ಪ್ರತಿಯೊಬ್ಬ ಮಗುವೂ ಸಹಜ ಕುತೂಹಲದೊಂದಿಗೆ ಬೆಳೆಯುತ್ತಾನೆ. ಸುತ್ತಮುತ್ತಲಿನ ಜಗತ್ತನ್ನು ಗಮನಿಸುವುದು, ಪ್ರಶ್ನೆಗಳನ್ನು ಕೇಳುವುದು, ಪ್ರಯೋಗಿಸುವುದು ಹಾಗೂ ಹೊಸ ವಿಷಯಗಳನ್ನು ತಿಳಿದುಕೊಳ್ಳುವ ಆಸಕ್ತಿ ಮಕ್ಕಳಲ್ಲಿ ಸಹಜವಾಗಿರುತ್ತದೆ. ಈ ಕುತೂಹಲಕ್ಕೆ ಸರಿಯಾದ ಮಾರ್ಗದರ್ಶನ ಹಾಗೂ ಜ್ಞಾನವನ್ನು ನೀಡಿದಾಗ ಅದು ಉತ್ತಮ ಕಲಿಕೆಯ ಜೊತೆಗೆ ಜವಾಬ್ದಾ-ರಿಯುತ ನಾಗರಿಕತ್ವದ ಅಡಿಪಾಯವಾಗುತ್ತದೆ ಎಂಬ ಉದ್ದೇಶದೊಂದಿಗೆ CIO ವಿಜ್ಞಾನ ಒಲಿಂಪಿಯಾಡ್ ರೂಪಿಸಲಾಗಿದೆ. ವಿಜ್ಞಾನ ಕಲಿಕೆಯೊಂದಿಗೆ ಪ್ರಾಮಾಣಿಕತೆ, ಪರಿಶ್ರಮ, ನಮ್ರತೆ, ಜವಾಬ್ದಾರಿ ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸುವ ಅಗತ್ಯವನ್ನೂ ಈ ಕಾರ್ಯಕ್ರಮ ಒತ್ತಿಹೇಳುತ್ತದೆ. ವಿಜ್ಞಾನ ಮತ್ತು ಮೌಲ್ಯಗಳು ಪರಸ್ಪರ ವಿರುದ್ಧವಾಗಿರದೆ, ಜ್ಞಾನವನ್ನು **ಮಾನವೀಯತೆಯ ಒಳಿತಿಗಾಗಿ ಬಳಸುವ ಚಿಂತನೆಯುಳ್ಳ ಯುವ ಪೀಳಿಗೆಯನ್ನು ರೂಪಿಸಲು ಸಹಕಾರಿಯಾಗಬೇಕು ಎಂಬ ಆಶಯವನ್ನು ಕಾರ್ಯಕ್ರಮ ಹೊಂದಿದೆ.**

ವಿದ್ಯಾರ್ಥಿಗಳಿಗೆ ಹಲವು ಪ್ರಯೋಜನಗಳು ಅಋಔ ವಿಜ್ಞಾನ ಒಲಿಂಪಿಯಾಡ್‌ನಲ್ಲಿ ಭಾಗವಹಿಸುವುದರಿಂದ ವಿದ್ಯಾರ್ಥಿಗಳು ತಮ್ಮ ವೈಜ್ಞಾನಿಕ ಪರಿಕಲ್ಪನಾ ಜ್ಞಾನವನ್ನು ಬಲಪಡಿಸಿಕೊಳ್ಳುವುದರ ಜೊತೆಗೆ ವೈಜ್ಞಾನಿಕ ಚಿಂತನೆ ಮತ್ತು ತಾರ್ಕಿಕ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಿಕೊಳ್ಳಲು ಅವಕಾಶ ದೊರೆಯಲಿದೆ. ನೈಜ ಜೀವನದ ವಿಜ್ಞಾನ ಸಮಸ್ಯೆಗಳನ್ನು ಅರ್ಥೈಸುವುದು, ಒಲಿಂಪಿಯಾಡ್ ಮಾದರಿಯ ಪ್ರಶ್ನೆಗಳನ್ನು ಎದುರಿಸುವುದು ಹಾಗೂ ಭವಿಷ್ಯದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಆತ್ಮವಿಶ್ವಾಸ ಬೆಳೆಸಿಕೊಳ್ಳಲು ಇದು ಸಹಕಾರಿಯಾಗಲಿದೆ. ಒಲಿಂಪಿಯಾಡ್‌ನಲ್ಲಿ ನಗರ ಮಟ್ಟ ಹಾಗೂ ಜಿಲ್ಲಾ ಮಟ್ಟದ ಸ್ಪರ್ಧೆಗಳ ಮೂಲಕ ವಿದ್ಯಾರ್ಥಿಗಳ ಪ್ರತಿಭೆಯನ್ನು ಗುರುತಿಸುವ ವ್ಯವಸ್ಥೆ ಕಲ್ಪಿಸಲಾಗಿದೆ. ರಾಷ್ಟ್ರೀಯ ಗುಣಮಟ್ಟದ ಪ್ರಶ್ನೆಗಳು, ಒಲಿಂಪಿಯಾಡ್ ಮಟ್ಟದ ಚಿಂತನೆ, ಹಂತ ಹಂತದ ಆಯ್ಕೆ ಪ್ರಕ್ರಿಯೆ ಹಾಗೂ ನ್ಯಾಯೋಚಿತ ಮತ್ತು ಪಾರದರ್ಶಕ ಮೌಲ್ಯಮಾಪನಕ್ಕೆ ಆದ್ಯತೆ ನೀಡಲಾಗಿದೆ.

ಚಿನ್ನ, ಬೆಳ್ಳಿ, ಕಂಚಿನ ಪದಕಗಳೊಂದಿಗೆ ಪ್ರಮಾಣಪತ್ರ ಸ್ಪರ್ಧೆಯಲ್ಲಿ ಉತ್ತಮ ಸಾಧನೆ ಮಾಡುವ ವಿದ್ಯಾರ್ಥಿಗಳಿಗೆ ಚಿನ್ನದ ಪದಕ, ಬೆಳ್ಳಿ ಪದಕ ಹಾಗೂ ಕಂಚಿನ ಪದಕ ಸೇರಿದಂತೆ ವಿವಿಧ ರೀತಿಯ ಮನ್ನಣೆ ನೀಡಲಾಗುತ್ತದೆ. ಭಾಗವಹಿಸುವ ವಿದ್ಯಾರ್ಥಿಗಳಿಗೆ ಭಾಗವಹಿಸುವಿಕೆ ಪ್ರಮಾಣಪತ್ರ ಕೂಡ ನೀಡಲಾಗುತ್ತದೆ. ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ವಿಚಾರಣೆ, ಪ್ರಶ್ನಿಸುವ ಮನೋಭಾವ, ಸಂಶೋಧನಾ ದೃಷ್ಟಿಕೋನ ಹಾಗೂ ನೈಜ ಸಮಸ್ಯೆಗಳನ್ನು ಪರಿಹರಿಸುವ ಸಾಮರ್ಥ್ಯವನ್ನು ಬೆಳೆಸುವ ಉದ್ದೇಶದಿಂದ ಆಯೋಜಿಸಿರುವ ಈ ಒಲಿಂಪಿಯಾಡ್‌ನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸುವಂತೆ ಪೋಷಕರು, ಶಿಕ್ಷಕರು ಹಾಗೂ ಮಾರ್ಗದರ್ಶಕರು ಪ್ರೋತ್ಸಾಹಿಸಬೇಕು ಎಂದು ಸಂಘಟಕರು ಮನವಿ ಮಾಡಿದ್ದಾರೆ. "ಕುತೂಹಲದಿಂದ ಜ್ಞಾನವನ್ನು ಹುಡುಕಿ, ಸಮಗ್ರತೆಯಿಂದ ಸತ್ಯವನ್ನು ಅರಿತು, ಮಾನವೀಯತೆಯ ಒಳಿತಿಗಾಗಿ ವಿಜ್ಞಾನವನ್ನು ಬಳಸುವ ಪೀಳಿಗೆಯನ್ನು ರೂಪಿಸುವುದು" ಅಋಔ ರಾಷ್ಟ್ರೀಯ ವಿಜ್ಞಾನ ಒಲಿಂಪಿಯಾಡ್‌ನ ಪ್ರಮುಖ ಆಶಯವಾಗಿದೆ.

ಗುರುರಾಜ್ ಅವರ ನಿವೃತ್ತಿ ಜೀವನ ಸುಖಕರವಾಗಿರಲಿ -ಸಹಾಯಕ ನಿರ್ದೇಶಕ ಹನುಮಂತಪ್ಪ

❑ ನೈಜ್ಯ ದೆಸೆ ನ್ಯೂಸ್

ರಾಯಚೂರು: ರಾಯಚೂರು ತಾಲೂಕು ಪಂಚಾಯಿತಿಯ ದ್ವಿತೀಯ ದರ್ಜೆ ಲೆಕ್ಕ ಸಹಾಯಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಗುರುರಾಜ್ ತಂದೆ ಶಾಮರಾವ್ ಯಡ್ರಾಮಿ ಅವರ ನಿವೃತ್ತಿ ಜೀವನ ಸುಖಕರವಾಗಿರಲಿ ಎಂದು ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ (EO) ಹಾಗೂ ಸಹಾಯಕ ನಿರ್ದೇಶಕರು (AD) ಹನುಮಂತಪ್ಪ ಹಾಗೂ ಸಿಬ್ಬಂದಿ ವರ್ಗದವರು ಶುಭ ಹಾರೈಸಿದರು.

ಸೆ.29ರಂದು ನಡೆದ ಕಾರ್ಯಕ್ರಮದಲ್ಲಿ ಗುರುರಾಜ್ ಅವರನ್ನು ಸನ್ಮಾನಿಸಿ, ಅವರ ಸರ್ಕಾರಿ ಸೇವೆ, ಪರಿಶ್ರಮ ಮತ್ತು ನಿಷ್ಠೆ ಸದಾ ಇತರರಿಗೆ ಪ್ರೇರಣೆಯಾಗಲಿ. ನಿವೃತ್ತಿಯ ನಂತರದ ಜೀವನ ಆರೋಗ್ಯ, ಸಂತೋಷ ಮತ್ತು ನೆಮ್ಮದಿಯಿಂದ ಕೂಡಿರಲಿ ಎಂದು ಹಾರೈಸಿದರು.

ಗುರುರಾಜ್ ಅವರು ಗುಂಜಳ್ಳಿ



ಗ್ರಾಮ ಪಂಚಾಯಿತಿಯಲ್ಲಿ ದ್ವಿತೀಯ ದರ್ಜೆ ಲೆಕ್ಕ ಸಹಾಯಕರಾಗಿ (SDA) ಕರ್ತವ್ಯ ನಿರ್ವಹಿಸಿ, ಸೆ.30, 2026ರಂದು ಸರ್ಕಾರಿ ಸೇವೆಯಿಂದ ನಿವೃತ್ತರಾಗಿದ್ದಾರೆ.

ಈ ಸಂದರ್ಭದಲ್ಲಿ ಅವರ ಕುಟುಂಬಸ್ಥರು ಹಾಗೂ ಆಪ್ತಮಿತ್ರರು, ಧರ್ಮಪತ್ನಿ ನರ್ಮದಾ, ಮಗನಾದಂತ ಹರೀಶ್ ಆಚಾರ್ (ಜ್ಯೋತಿಷ್ಯರು), ಸೊಸೆ ಶ್ವೇತಾ ಕುಲಕರ್ಣಿ, ಮೊಮ್ಮಗಳು ಶ್ರೀ ಆದ್ಯ ಕುಲಕರ್ಣಿ, ಬಿಚ್ಚಾಲಿ ಸೇ-ರಿದಂತೆ ಹಲವರು ಗುರುರಾಜ್ ಅವರ ನಿವೃತ್ತಿ ಜೀವನ ಸುಖ, ಶಾಂತಿ ಹಾಗೂ ಆರೋಗ್ಯದಿಂದ ಕೂಡಿರಲಿ ಎಂದು ಶುಭ ಹಾರೈಸಿದ್ದಾರೆ.

ಮುಖ್ಯ ಚುನಾವಣಾ ಆಯುಕ್ತ ಗ್ಯಾನೇಶ್ ಕುಮಾರ್ ರಾಜೀನಾಮೆಗೆ ಕಾಂಗ್ರೆಸ್ ಯುವ ಮುಖಂಡ ಮಹಬೂಬ್ ಭಾಷಾ ಆಗ್ರಹ

❑ ನೈಜ್ಯ ದೆಸೆ ನ್ಯೂಸ್

ಗ್ಯಾನೇಶ್ ಕುಮಾರ್ ಅವರು ಮುಖ್ಯ ಚುನಾವಣಾ ಆಯುಕ್ತರ ಹುದ್ದೆಗೆ ರಾಜೀನಾಮೆ ನೀಡಬೇಕು. ಅದೇ ಸಮಯದಲ್ಲಿ, ಚುನಾವಣಾ ಆಯೋಗದೊಳಗೆ ದಾಖಲಾಗಿರುವ ಎಲ್ಲಾ ಆಕ್ಷೇ ಪಣೆಗಳು, ಅವುಗಳಿಗೆ ನೀಡಲಾದ ಉತ್ತರಗಳು, ಮತದಾರರ ಪಟ್ಟಿಯ ಪರಿಷ್ಕರಣೆಗೆ ಸಂಬಂಧಿಸಿದ ನಿರ್ಧಾರಗಳು ಮತ್ತು ಸಂಬಂಧಿತ ದಾಖಲೆಗಳನ್ನು ಸಾರ್ವಜನಿಕ ಪರಿಶೀಲನೆಗೆ ಮುಕ್ತಗೊಳಿಸಬೇಕು ಎಂದು ಯುವ ಕಾಂಗ್ರೆಸ್ ಪ್ರದಾನ ಕಾರ್ಯದರ್ಶಿ ಮಹಬೂಬ್ ಭಾಷಾ ಆಗ್ರಹಿಸಿದ್ದಾರೆ.

ಇಂಗ್ಲಿಷ್ ದೈನಿಕವೊಂದು ಪ್ರಕಟಿಸಿರುವ ತನಿಖಾ ವರದಿಯಲ್ಲಿ ಚುನಾವಣಾ ಆಯೋಗದ ಕಾರ್ಯವೈಖರಿ ಮತ್ತು ಆಂತರಿಕ ನಿರ್ಧಾರ ಪ್ರಕ್ರಿಯೆಯ ಕುರಿತು ಅತ್ಯಂತ ಗಂಭೀರ ಪ್ರಶ್ನೆಗಳನ್ನು



ಎತ್ತಿದೆ. ವರದಿಯ ಪ್ರಕಾರ, ಚುನಾವಣಾ ಆಯುಕ್ತರಾದ ಸುಖಬೀರ್ ಸಿಂಗ್ ಸಂಧು ಮತ್ತು ವಿವೇಕ್ ಜೋಶಿ ಅವರು ಕಳೆದ 10 ತಿಂಗಳಲ್ಲಿ ಕನಿಷ್ಠ 14 ಬಾರಿ ಚುನಾವಣಾ ಆಯೋಗದ ಕೆಲವು ನಿರ್ಧಾರಗಳು ಮತ್ತು ಆದೇಶಗಳ ಕುರಿತು ಅಧಿಕೃತವಾಗಿ ಆಕ್ಷೇಪ ದಾಖಲಿಸಿದ್ದಾರೆ.

ವರದಿಯಲ್ಲಿ ಹೊಸ ಮತದಾರರ ನೋಂದಣಿ, ಮತದಾರರ ಪಟ್ಟಿಯಿಂದ ಹೆಸರುಗಳ ಅಳಿಸುವಿಕೆ ಮತ್ತು ಮರುಸ್ಥಾಪನೆ. ಚುನಾವಣಾ ಡೇಟಾಬೇಸ್‌ನ ಪ್ರವೇಶ ಹಾಗು ಖಋಖ ಪ್ರಕ್ರಿಯೆಗೆ ಸಂಬಂಧಿಸಿದ ಹಲವು ವಿಷಯಗಳ ಕುರಿತು ಆಕ್ಷೇಪಣೆಗಳು ದಾಖಲಾಗಿವೆ. ಎಂದು ಹೇಳಲಾಗಿದೆ.

ಕೆಲವು ಕ್ರಮಗಳನ್ನು ಅನಧಿಕೃತ ಹಾಗು ಅಕ್ರಮ ಎಂದು ಆಕ್ಷೇಪಿಸಿರುವುದಾಗಿಯೂ ವರದಿ ತಿಳಿಸಿದೆ. ಇಂತಹ ಗಂಭೀರ ಆಕ್ಷೇಪಣೆಗಳು ಚುನಾವಣಾ ಆಯೋಗದ ಇಬ್ಬರು ಸದಸ್ಯ-ರಿಂದಲೇ ದಾಖಲಾಗಿರುವ ಸಂದರ್ಭದಲ್ಲಿ, ಮುಖ್ಯ ಚುನಾವಣಾ ಆಯುಕ್ತ ಗ್ಯಾನೇಶ್ ಕುಮಾರ್ ಅವರು ದೇಶದ ಜನ-ರಿಗೆ ಸ್ಪಷ್ಟವಾದ ಉತ್ತರ ನೀಡಬೇಕು. ಇಬ್ಬರು ಚುನಾವಣಾ ಆಯುಕ್ತರು ದಾಖಲಿಸಿರುವ 14 ಆಕ್ಷೇಪಣೆಗಳಿಗೆ ಚುನಾವಣಾ ಆಯೋಗದ ಸಂಪೂರ್ಣ ಅಧಿಕೃತ ಉತ್ತರವೇನು? ಎಸ್‌ಐಆರ್ ಪ್ರಕ್ರಿಯೆಯಲ್ಲಿ ಮತದಾರರ ಹೆಸರುಗಳನ್ನು ತೆಗೆದುಹಾಕಲು ಬಳಸಿದ ಮಾನದಂಡಗಳು ಮತ್ತು ಪ್ರಕ್ರಿಯೆಗಳು ಸಂಪೂರ್ಣವಾಗಿ ಸಾರ್ವಜನಿಕವಾಗಿವೆಯೇ ಅರ್ಹ ಮತದಾರರ ಹೆಸರು ತಪ್ಪಾಗಿ ತೆಗೆದು ಹಾಕಲ್ಪಟ್ಟಿದ್ದರೆ, ಅವರನ್ನು ಮರುಸೇರಿಸಲು ಖಚಿತವಾದ ವ್ಯವಸ್ಥೆ ಏನು? ಚುನಾವಣಾ ಡೇಟಾಬೇಸ್‌ನ ಕೇಂದ್ರೀಕರಣ ಮತ್ತು ಅದರ ಪ್ರವೇಶಕ್ಕೆ ಸಂಬಂಧಿಸಿದಂತೆ ಎತ್ತಲಾಗಿರುವ ಆಕ್ಷೇಪಣೆಗಳಿಗೆ ಯಾರು ಹೊಣೆಗಾರರು? ಚುನಾವಣಾ ಆಯೋಗದೊಳಗೆ ದಾಖಲಾಗಿರುವ ಎಲ್ಲಾ ಭಿನ್ನಾಭಿಪ್ರಾಯಗಳು ಮತ್ತು ಅವುಗಳ ಕುರಿತು ಕೈಗೊಂಡ ಕ್ರಮಗಳನ್ನು ಸಾರ್ವಜನಿಕರಿಗೆ ಬಹಿರಂಗಪಡಿಸಲು ಆಯೋಗ ಸಿದ್ಧವಿದೆಯೇ? ಎಂದು ಮಹಬೂಬ್ ಭಾಷಾ ಪ್ರಶ್ನಿಸಿದ್ದಾರೆ.

ಗ್ರಾಮಗಳಿಗೆ ಸಮರ್ಪಕ ಹಾಗೂ ನಿಗದಿತ ಸಮಯದಲ್ಲಿ ವಿದ್ಯುತ್ ಪೂರೈಕೆ ಮಾಡುವಂತೆ ಕರವೇ ಒತ್ತಾಯ

❑ ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು: ತಾಲೂಕಿನ ಪೈದೊಡ್ಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಸುಮಾರು 7 ಗ್ರಾಮಗಳಿಗೆ ಸಮರ್ಪಕವಾಗಿ ವಿದ್ಯುತ್ ಪೂರೈಕೆ ಮಾಡದಿರುವುದರಿಂದ ಗ್ರಾಮಸ್ಥರು ಹಲವು ದಿನಗಳಿಂದ ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ.

ಗ್ರಾಮಗಳಿಗೆ ಸಮರ್ಪಕ ಹಾಗೂ ನಿಗದಿತ ಸಮಯದಲ್ಲಿ ವಿದ್ಯುತ್ ಪೂರೈಕೆ ಮಾಡುವಂತೆ ಕರವೇ ಸ್ವಾಭಿಮಾನಿ ಸೇನೆ ತಾಲೂಕ ಅಧ್ಯಕ್ಷ ಜಿಲಾನಿ ಪಾಷಾ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ವಿ), ಜೆಸ್ಕಾಂ ಇವರಿಗೆ ಮನವಿಯನ್ನು ಸಲ್ಲಿಸಿದರು . ಈ ಹಿಂದೆ ಸಂಜೆ ಸುಮಾರು 6 ಗಂಟೆಗೆ ವಿದ್ಯುತ್ ಪೂರೈಕೆ ಮಾಡಲಾಗುತ್ತಿತ್ತು. ಆದರೆ ಇತ್ತೀಚೆಗೆ ರಾತ್ರಿ 8 ಗಂಟೆಯ ನಂತರ ವಿದ್ಯುತ್ ಪೂರೈಕೆ ಮಾಡಲಾಗುತ್ತಿರುವುದರಿಂದ ವಿದ್ಯಾರ್ಥಿಗಳು, ರೈತರು, ಮಹಿಳೆಯರು ಹಾಗೂ ವೃದ್ಧರು ಸೇರಿದಂತೆ ಗ್ರಾಮಸ್ಥ-ರಿಗೆ ತೀವ್ರ ತೊಂದರೆಯಾಗಿದೆ ಪ್ರಸ್ತುತ ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಅರ್ಧವಾರ್ಷಿಕ ಪರೀಕ್ಷೆಗಳು ನಡೆಯುತ್ತಿದ್ದು, ಸಂಜೆ ಸಮಯದಲ್ಲಿ ವಿದ್ಯುತ್



ಇಲ್ಲದಿರುವುದರಿಂದ ವಿದ್ಯಾರ್ಥಿಗಳಿಗೆ ಓದು ಹಾಗೂ ಪರೀಕ್ಷಾ ಸಿದ್ಧತೆ ಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ.

ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಈಗಾಗಲೇ ಹಲವು ಸೌಲಭ್ಯಗಳ ಕೊರತೆಯ ನಡುವೆ ಶಿಕ್ಷಣ ಪಡೆಯುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಪಟ್ಟಣ ಪ್ರದೇಶದ ವಿದ್ಯಾರ್ಥಿಗಳಿಗೆ ಸಿಗುವಂತಹ ಶೈಕ್ಷಣಿಕ ವಾತಾವರಣ ಗ್ರಾಮೀಣ ವಿದ್ಯಾರ್ಥಿಗಳಿಗೆ ದೊರೆಯದಂತಾಗಿದೆ. ವಿದ್ಯುತ್ ಪೂರೈಕೆಯಲ್ಲಿನ ಈ ವ್ಯತ್ಯಯದಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಹಿನ್ನಡೆಯಾಗುವ ಸಾಧ್ಯತೆಯಿದ್ದು, ಸ್ಪರ್ಧಾತ್ಮಕ ಪರೀಕ್ಷೆಗಳು ಹಾಗೂ ಇತರೆ ಶೈಕ್ಷಣಿಕ ಚಟುವಟಿಕೆಗಳಲ್ಲಿ ಪಟ್ಟಣದ ವಿದ್ಯಾರ್ಥಿ ಗಳೊಂದಿಗೆ ಸ್ಪರ್ಧಿಸಲು ತೊಂದರೆ ಯಾಗುತ್ತಿದೆ.

ಪೈದೊಡ್ಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯು ಗುಡ್ಡಗಾಡು ಪ್ರದೇಶವಾಗಿದ್ದು, ರಾತ್ರಿ ಸಮಯದಲ್ಲಿ ವಿಷಜಂತುಗಳ ಹಾವಳಿ ಹೆಚ್ಚಾಗಿರುತ್ತದೆ. ಕತ್ತಲಿನ ಪರಿಸ್ಥಿತಿಯಲ್ಲಿ ಗ್ರಾಮಸ್ಥರು ಸಂಚರಿಸುವುದು ಅಪಾಯ ಕಾರಿಯಾಗಿದ್ದು, ಹಾವು, ಚೇಳು ಸೇರಿದಂತೆ ವಿಷ-ಜಂತುಗಳ ಕಡಿತದಂತಹ ಘಟನೆಗಳು ಸಂಭವಿಸುವ ಸಾಧ್ಯತೆಯಿದೆ. ವಿದ್ಯುತ್ ಕೊರತೆಯಿಂದ ಗ್ರಾಮಸ್ಥರ ಸುರಕ್ಷತೆಗೂ ಧಕ್ಕೆಯಾಗುತ್ತಿದೆ. ಇಂತಹ ಸಂದರ್ಭದಲ್ಲಿ ಯಾವುದೇ ಅನಾಹುತ ಸಂಭವಿಸಿದರೆ ಅದರ ಹೊಣೆಗಾರಿಕೆ ಯಾರದ್ದು ಎಂಬ ಆತಂಕ ಗ್ರಾಮಸ್ಥರಲ್ಲಿ ಮೂಡಿದೆ. ಸಂಬಂಧಪಟ್ಟ ಸೆಕ್ಷನ್ ಅಧಿಕಾರಿಗಳನ್ನು ಗ್ರಾಮಸ್ಥರು ವಿಚಾರಿಸಿದಾಗ, ಮೇಲಾಧಿಕಾರಿಗಳು ನೀಡಿರುವ ಆದೇಶದಂತೆ ಕೆಲಸ ಮಾಡುತ್ತಿದ್ದೇವೆ. ನೀವು ಹೇಳಿದಂತೆ ನಾನು ಮಾಡಲು ಸಾಧ್ಯವಿಲ್ಲ" ಎಂದು ಉತ್ತರಿಸು- ತ್ತಿರುವುದಲ್ಲದೆ, ಸಮಸ್ಯೆ ಕುರಿತು ಪ್ರಶ್ನಿಸುವ ಗ್ರಾಮಸ್ಥರಿಗೆ ಸೂಕ್ತ ಸ್ಪಂದನೆ ನೀಡುತ್ತಿಲ್ಲ.

ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ಸಂಬಂಧಪಟ್ಟ ಹೆಸ್ಕಾಂ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಿ, ಪೈದೊಡ್ಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಏಳು ಗ್ರಾಮಗಳಿಗೆ ಹಿಂದಿನಂತೆ ಸಂಜೆ 6 ಗಂಟೆಯಿಂದಲೇ ಸಮರ್ಪಕ ಹಾಗೂ ನಿರಂತರ ವಿದ್ಯುತ್ ಪೂರೈಕೆ ಮಾಡುವಂತೆ ಕ್ರಮ ಕೈಗೊಳ್ಳಬೇಕು. ವಿಶೇಷವಾಗಿ ವಿದ್ಯಾರ್ಥಿಗಳ ಅರ್ಧವಾರ್ಷಿಕ ಪರೀಕ್ಷೆಗಳ ಹಿನ್ನೆಲೆಯಲ್ಲಿ ಸಂಜೆ ಮತ್ತು ರಾತ್ರಿ ವೇಳೆಯಲ್ಲಿ ವಿದ್ಯುತ್ ಪೂರೈಕೆಗೆ ಆದ್ಯತೆ ನೀಡಬೇಕು.

ಜೊತೆಗೆ, ಗುಡ್ಡಗಾಡು ಪ್ರದೇಶದ ಗ್ರಾಮಸ್ಥರ ಸುರಕ್ಷತೆಯನ್ನು ಗಮನದಲ್ಲಿಟ್ಟು ಕೊಂಡು ವಿದ್ಯುತ್ ಪೂರೈಕೆಯಲ್ಲಿ ಅನಗತ್ಯ ವ್ಯತ್ಯಯವಾಗದಂತೆ ಶಾಶ್ವತ ಕ್ರಮ ಕೈಗೊಳ್ಳಬೇಕು. ವಿದ್ಯುತ್ ಪೂರೈಕೆ ವೇಳಾಪಟ್ಟಿ ಹಾಗೂ ಸಮಸ್ಯೆಗೆ ಕಾರಣಗಳ ಕುರಿತು ಗ್ರಾಮಸ್ಥರಿಗೆ ಸ್ಪಷ್ಟ ಮಾಹಿತಿ ನೀಡುವಂತೆ ಸಂಬಂಧಪಟ್ಟ ಅಧಿಕಾ-ರಿಗಳಿಗೆ ಸೂಚಿಸ ಬೇಕೆಂದರು .ಈ ಸಂದರ್ಭದಲ್ಲಿ ಅಜೀಜ್ ಪಾಶಾ , ಗ್ರಾಮ ಘಟಕ ಪ್ರಭು ಪಾಟೀಲ್ , ರವಿಕುಮಾರ್ ಬರಗುಡಿ ,ಗೋಪಾಲಪ್ಪ , ಹನುಮಪ್ಪ ಸುರಪುರ , ಹನುಮಂತ ರಾಯನಕೆರೆ , ಹನುಮಂತ ಕಬ್ಬೇರ , ಭೀಮಣ್ಣ ಕಂಬಾರ , ಸಾಬಣ್ಣ ಯರಜಂತಿ , ಚಂದ್ರು , ಬದ್ದೇಶ , ಬಸಪ್ಪ ,ರಂಗಪ್ಪ , ಅಂಬಪ್ಪಗೌಡ ,ಮುತ್ತಣ್ಣ ಬುಳ್ಳಯ್ಯ , ಅಮರೇಶ ಭೂಪುರ , ಚಂದ್ರು , ಮುದುಕಪ್ಪ ಗುರಿಕಾರ ಸೇರಿದಂತೆ ಇತರರು ಇದ್ದರು .

ಸಾಹಿತ್ಯ ಸಿಂಚನ

ಚಂದ್ರನಿಗೆ ಬರೆದ ಪತ್ರ

ಚಂದಿರನೇ, ನಿನಗೊಂದು ಪತ್ರ ಬರೆದಿರುವೆ,
ಮನದ ಮಾತುಗಳನ್ನೆಲ್ಲ ಅದರಲ್ಲಿ ತುಂಬಿರುವೆ.
ನಿನ್ನ ಬೆಳ್ಳಿಯ ಬೆಳಕಿನಲಿ ಕನಸು ಕಂಡೆ,
ನನ್ನ ಆಸೆ–ಆಕಾಂಕ್ಷೆಗಳನ್ನು ನಿನಗೆ ಹೇಳಿದೆ.

ರಾತ್ರಿಯ ಆಕಾಶದಲಿ ನೀನು ನಗುವಾಗ,
ನನ್ನ ಮನದಲ್ಲೂ ಹೊಸ ಭರವಸೆ ಮೂಡುವಾಗ.
ನಕ್ಷತ್ರಗಳ ನಡುವೆ ನೀನು ಮಿನುಗುವಾಗ,
ನನ್ನ ಕಣ್ಣಲ್ಲೂ ಕನಸುಗಳು ಅರಳುವಾಗ.

ದೂರದಲ್ಲಿದ್ದರೂ ಹತ್ತಿರವೆನಿಸುವೆ,
ಕತ್ತಲೆಯ ದಾರಿಯಲ್ಲಿ ಬೆಳಕಾಗಿರುವೆ.
ನನ್ನ ನೋವು–ನಲಿವುಗಳಿಗೆ ಸಾಕ್ಷಿಯಾಗಿರು,
ನನ್ನ ಕನಸುಗಳಿಗೆ ಸದಾ ಜೊತೆಗಾರನಾಗಿರು.

ನಿನ್ನ ತಂಪಾದ ಬೆಳಕು ಮನಕೆ ಹಿತವನು ನೀಡುತ್ತದೆ,
ನಿನ್ನ ಮೌನವು ಸಿಹಿಯಾದ ಮಾತನು ಆಡುತ್ತದೆ.
ನನ್ನ ಪುಟ್ಟ ಪತ್ರವನ್ನು ಜೋಪಾನವಾಗಿ ಇಡು,
ನನ್ನ ಕನಸುಗಳಿಗೆ ನೀನು ಕಾವಲಾಗಿ ನಿಲ್ಲು.

ಚಂದಿರನೇ, ನೀನು ಆಕಾಶದ ಮುತ್ತಾಗಿರು,
ನನ್ನ ಬದುಕಿನ ಕನಸುಗಳ ಬೆಳಕಾಗಿರು.
ಪ್ರತಿ ರಾತ್ರಿ ನಿನ್ನನ್ನು ನೋಡುತ್ತಾ ನಗುವೆ,
ನಿನ್ನೊಡನೆ ನನ್ನ ಕನಸುಗಳ ಲೋಕ ಕಟ್ಟುವೆ

ಸಿರವಾರದಲ್ಲಿ ಯತ್ನಾಳ್ ಗುಡುಗು: ಭ್ರಷ್ಟಾಚಾರ ಮುಕ್ತ ಜೆಸಿಬಿ ಸರ್ಕಾರದ ಗುರಿ

❑ ನೈಜ್ಯ ದೆಸೆ ನ್ಯೂಸ್

ಸಿರವಾರ: ರಾಜ್ಯದಲ್ಲಿ ಭ್ರಷ್ಟಾಚಾರ ಮಿತಿ ಮೀರುತ್ತಿದೆ ಎಂದು ಆರೋಪಿಸಿರುವ ಉಚ್ಚಾಟಿತ ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್, ಪ್ರಸ್ತುತ ರಾಜಕೀಯ ವ್ಯವಸ್ಥೆಯಲ್ಲಿ ಬದಲಾವಣೆ ತರಲು ಹೊಸ ರಾಜಕೀಯ ಶಕ್ತಿ ರೂಪಿಸಲಾಗುತ್ತಿದೆ ಎಂದು ಹೇಳಿದರು.



ಸಿರವಾರದಲ್ಲಿ ನಿನ್ನೆ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, "ರಾಜ್ಯದಲ್ಲಿ ಭ್ರಷ್ಟಾಚಾರ ಮುಕ್ತ ಜೆಸಿಬಿ ಸರ್ಕಾರ ತರುವುದು ನಮ್ಮ ಗುರಿ" ಎಂದು ಘೋಷಿಸಿದರು. ರಾಜ್ಯ ರಾಜಕಾರಣದಲ್ಲಿ ಹೊಂದಾಣಿಕೆ ರಾಜಕಾರಣ ನಡೆಯುತ್ತಿದೆ ಎಂದು ಆರೋಪಿಸಿದ ಅವರು, ಕುಟುಂಬ ರಾಜಕಾರಣಕ್ಕೆ ಕಡಿವಾಣ ಹಾಕಿ ಸಾಮಾನ್ಯ ಕಾರ್ಯಕರ್ತರಿಗೆ ರಾಜಕೀಯ ಅವಕಾಶ ಕಲ್ಪಿಸಬೇಕು ಎಂದು ಪ್ರತಿಪಾದಿಸಿದರು. ಮೂರು ಪಕ್ಷಗಳ ಕಾರ್ಯಕರ್ತರಿಗೆ ಒಂದೇ ವೇದಿಕೆ ಎಬಿಃ ಎಂಬ ಹೆಸರಿನ ಪರಿಕಲ್ಪನೆಯನ್ನು ವಿವರಿಸಿದ ಯತ್ನಾಳ್, ಎ ಎಂದರೆ ಜೆಡಿಎಸ್, ಅ ಎಂದರೆ ಕಾಂಗ್ರೆಸ್ ಹಾಗೂ ಃ ಎಂದರೆ ಬಿಜೆಪಿ ಎಂದು ಹೇಳಿದರು. ಈ ಮೂರು ಪಕ್ಷಗಳಲ್ಲಿ ವರ್ಷಗಳಿಂದ ದುಡಿಯುತ್ತಿರುವ ನಿಷ್ಠಾವಂತ ಕಾರ್ಯಕರ್ತರಲ್ಲಿ ಅಸಮಾಧಾನವಿದೆ ಎಂದು ಹೇಳಿದ ಅವರು, ಅಂತಹ ಕಾರ್ಯಕರ್ತರನ್ನು ಒಗ್ಗೂಡಿಸಿ ಹೊಸ ರಾಜಕೀಯ ಪಕ್ಷ ನಿರ್ಮಿಸುವ ಪ್ರಯತ್ನ ನಡೆಯುತ್ತಿದೆ ಎಂದರು. "ಕಾರ್ಯಕರ್ತರ ಶ್ರಮದಿಂದ ಪಕ್ಷಗಳು ಬೆಳೆದರೂ, ಅವರಿಗೆ ಸೂಕ್ತ ರಾಜಕೀಯ ಅವಕಾಶ ಸಿಗಬೇಕಾದಷ್ಟು ಸಿಗುತ್ತಿಲ್ಲ. ಅಂತಹ ಕಾರ್ಯಕರ್ತರಿಗೆ ಹೊಸ ವೇದಿಕೆ ಒದಗಿಸುವುದು ನಮ್ಮ ಉದ್ದೇಶ" ಎಂದು ಯತ್ನಾಳ್ ಹೇಳಿದರು. 2028ರ ಚುನಾವಣೆಯೇ ಪ್ರಮುಖ ಗುರಿ ಮುಂಬರುವ 2028ರ ವಿಧಾನಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಜೆಸಿಬಿ ಪಕ್ಷದ ಸಂಘಟನೆ ರೂಪಿಸಲಾಗುತ್ತಿದೆ ಎಂದು ಅವರು ತಿಳಿಸಿದರು. ರಾಜ್ಯದ ವಿವಿಧ ವಿಧಾನಸಭಾ ಕ್ಷೇತ್ರಗಳಲ್ಲಿ ಪಕ್ಷದ ಸಂಘಟನೆ ಬಲಪಡಿಸಿ ಅಭ್ಯರ್ಥಿಗಳನ್ನು ಕಣಕ್ಕಿಳಿಸುವ ಉದ್ದೇಶವಿದೆ ಎಂದು ಹೇಳಿದ ಯತ್ನಾಳ್, ಚುನಾವಣೆಯಲ್ಲಿ ಸ್ಪರ್ಧಿಸಿ ಬಹುಮತದೊಂದಿಗೆ ಸರ್ಕಾರ ರಚಿಸುವ ಗುರಿ ಹೊಂದಿದ್ದೇವೆ ಎಂದರು. "ಹಿಂದೂ ಧರ್ಮದ ರಕ್ಷಣೆಗೆ ಆದ್ಯತೆ" ಜೆಸಿಬಿ ಪಕ್ಷ ಅಧಿಕಾರಕ್ಕೆ ಬಂದರೆ ಹಿಂದೂ ಧರ್ಮದ ರಕ್ಷಣೆಗೆ ಆದ್ಯತೆ ನೀಡಲಾಗುವುದು ಎಂದು ಯತ್ನಾಳ್ ಹೇಳಿದರು. ಅದೇ ವೇಳೆ, ರಾಜ್ಯದಲ್ಲಿ ಭ್ರಷ್ಟಾಚಾರ ನಿಯಂತ್ರಣ, ಪಾರದರ್ಶಕ ಆಡಳಿತ ಹಾಗೂ ಜನಪರ ಆಡಳಿತಕ್ಕೆ ಒತ್ತು ನೀಡುವುದಾಗಿ ಅವರು ತಿಳಿಸಿದರು. ಜನರ ಬೆಂಬಲಕ್ಕೆ ಮನವಿ ರಾಜ್ಯದಲ್ಲಿ ಭ್ರಷ್ಟಾಚಾರ ಮುಕ್ತ ಕರ್ನಾಟಕ ನಿರ್ಮಿಸುವ ಉದ್ದೇಶದಿಂದ ಹೊಸ ರಾಜಕೀಯ ಪ್ರಯತ್ನ ಆರಂಭಿಸಲಾಗಿದೆ ಎಂದು ಹೇಳಿದ ಯತ್ನಾಳ್, ಈ ಪ್ರಯತ್ನಕ್ಕೆ ಜನರು ಬೆಂಬಲ ನೀಡಬೇಕು ಎಂದು ಮನವಿ ಮಾಡಿದರು. ಹೊಸ ಪಕ್ಷದ ಮೂಲಕ ಸಾಮಾನ್ಯ ಕಾರ್ಯಕರ್ತರು ಹಾಗೂ ಜನಸಾಮಾನ್ಯರ ಧ್ವನಿಯನ್ನು ರಾಜಕೀಯ ವೇದಿಕೆಯಲ್ಲಿ ಬಲಪಡಿಸುವ ಉದ್ದೇಶ ಹೊಂದಿರುವುದಾಗಿ ಅವರು ಹೇಳಿದರು. ಯತ್ನಾಳ್ ಅವರ ಈ ಹೇಳಿಕೆಗಳು ರಾಜ್ಯ ರಾಜಕೀಯದಲ್ಲಿ ಹೊಸ ಚರ್ಚೆಗೆ ಕಾರಣವಾಗಿದ್ದು, 2028ರ ವಿಧಾನಸಭಾ ಚುನಾವಣೆಗೆ ಇನ್ನೂ ಸಮಯವಿರುವಾಗಲೇ ಪರ್ಯಾಯ ರಾಜಕೀಯ ವೇದಿಕೆಯ ಘೋಷಣೆ ರಾಜಕೀಯ ವಲಯದಲ್ಲಿ ಗಮನ ಸೆಳೆದಿದೆ.

"ಅಂತರಾಷ್ಟ್ರೀಯ ಸುರಕ್ಷಿತ ಗರ್ಭಪಾತ ದಿನ"– 2026

❑ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ರಾಯಚೂರು,ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು, ಹಾಗೂ ತಾಲೂಕು ಆರೋಗ್ಯ ಅಧಿಕಾರಿಗಳ ಕಾರ್ಯಾಲಯ ಸಿಂಧನೂರ, ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ಸಿಂಧನೂರ್ ಇವರ ಸಂಯುಕ್ತ ಆಶ್ರಯದಲ್ಲಿ ನಗರದ ೦ಖ ಗೋಪಾಲ ನಗರದಲ್ಲಿ ಗರ್ಭಿಣಿ ತಾಯಂದಿರಿಗೆ ಹಾಗೂ ಸಾರ್ವಜನಿಕರಿಗೆ ಸುರಕ್ಷಿತ ಗರ್ಭಪಾತ ಸೇವೆಯು ಮಹಿಳೆಯರ ಆರೋಗ್ಯ ಮತ್ತು ಜೀವ ರಕ್ಷಣೆಯ ಭಾಗವಾಗಿದೆ ಸಂಕೋಚವಿಲ್ಲದೆ ಸುರಕ್ಷಿತ ಹಾಗೂ ಕಾನೂನು ಬದ್ಧ ವೈದ್ಯಕೀಯ ಸಹಾಯ ಪಡೆಯುವುದು ಪ್ರತಿಯೊಬ್ಬರ ಹಕ್ಕಾಗಿದೆ.

"ಒಂದಾಗಿ ಮುನ್ನಡೆಯೋಣ ಎಲ್ಲರಿಗೂ ಸಮಾನ ಆಯ್ಕೆ ಮತ್ತು ಅವಕಾಶ " ಗರ್ಭ ಧರಿಸಿದ ಎರಡು ತಿಂಗಳ ತನಕ ಮಾತ್ರೆಗಳ ಮೂಲಕ ಗರ್ಭಪಾತ ಮೂರು



ತಿಂಗಳ ತನಕ ಗರ್ಭಪಾತವು ಸುಲಭ ಮತ್ತು ಸುರಕ್ಷಿತ ನಾಲ್ಕುವರೆ ತಿಂಗಳ ತನಕ ಗರ್ಭಪಾತವು ಕಾನೂನು ಬದ್ಧವಾಗಿದೆ ವಿಶೇಷ ಸಂದರ್ಭಗಳಲ್ಲಿ ಮಹಿಳೆಯರು 5 1/2 ತಿಂಗಳುಗಳ ತನಕದ ಗರ್ಭಪಾತ ಸೇವೆಯನ್ನು ಕಾನೂನಾತ್ಮಕವಾಗಿ ಪಡೆಯಬಹುದು ಅಂತರಾಷ್ಟ್ರೀಯ ಸುರಕ್ಷತೆ ಗರ್ಭಪಾತದ ದಿನವನ್ನು ಪ್ರತಿ ವರ್ಷ ಸೆಪ್ಟೆಂಬರ್ 28ರಂದು ಆಚರಿಸಲಾಗುತ್ತದೆ ಮಹಿಳೆಯರ ಆರೋಗ್ಯ ಜೀವ ರಕ್ಷಣೆ ಮತ್ತು ಸುರಕ್ಷಿತ ಗರ್ಭಪಾತ ಸೇವೆಗಳ ಕುರಿತು ಸಮುದಾಯದಲ್ಲಿ ವೈಜ್ಞಾನಿಕ ಹಾಗೂ ಕಾನೂನಾತ್ಮಕವಾಗಿ ಸೇವೆಯನ್ನು ಪಡೆಯುವುದು ಒಬ್ಬ ಮಹಿಳೆಯು ಸುರಕ್ಷಿತವಾಗಿ ಗರ್ಭಪಾತ ಸೇವೆಯನ್ನು ಆರೋಗ್ಯ ಮತ್ತು ಜೀವ ರಕ್ಷಣೆಯ ಪ್ರಮುಖ ಭಾಗವಾಗಿದ್ದು ಯಾವುದೇ ಸಂಕೋಚವಿಲ್ಲದೆ ಸುರಕ್ಷಿತ ಹಾಗೂ ವೈದ್ಯಕೀಯ ಸಹಾಯದ ಮೂಲಕ ಗರ್ಭಪಾತವನ್ನು ಪಡೆಯುವಂಥ ಪಡೆಯುವುದು .

"ಲ್ಯಾಟಿನ್ ಅಮೇರಿಕ ಮತ್ತು ಕೆರೆಬಿಯನ್ ನಲ್ಲಿ 1990ರಲ್ಲಿ ಗರ್ಭಪಾತದ ಅಪರಾಧೀಕರಣದ ವಿರುದ್ಧ ಆರಂಭವಾದ ಚಳುವಳಿಯ ನೆನಪಿಗಾಗಿ ಹಾಗೂ 2011ರ 'ಸಂತಾನೋತ್ಪತ್ತಿ ಹಕ್ಕುಗಳ ಮಹಿಳೆಯರ ಜಾಗತಿಕ ನೆಟ್ವರ್ಕ್' ಈ ದಿನವನ್ನು ಅಧಿಕೃತವಾಗಿ ಘೋಷಿಸಿತು. ಮಹಿಳೆಯರಲ್ಲಿ ಸೋಂಕುಗಳು ಉಂಟಾಗುವ ಕಾರಣ ವೈದ್ಯ ಸಲಹೆ ಪಡೆದು ಚಿಕಿತ್ಸೆ ಪಡೆಯುವುದು ಉತ್ತಮ ಎಂದು ತಿಳಿಸಲಾಯಿತಿ. ಈ ಕಾರ್ಯಕ್ರಮದಲ್ಲಿ ಕಮಲ ಪಿ ಎಚ್ ಸೇವ, ಅಮೃತಮ್ಮ ಕವಿತಾ ಆಶಾ ಕಾರ್ಯಕರ್ತೆಯರು ಮಹದೇವಿ ಫಾತಿಮಾ ಬೇಗಮ್ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

ಆರೋಪಗಳ ರಾಜಕೀಯಕ್ಕಿಂತ ಅಭಿವೃದ್ಧಿಯ ರಾಜಕೀಯ ಮಾಡಿ: ಮಮತಾ ಪ್ರಭು ದೊರೆ

❑ ನೈಜ್ಯ ದೆಸೆ ನ್ಯೂಸ್

ದೇವದುರ್ಗ: ದೇವದುರ್ಗ ಕ್ಷೇತ್ರದ ಶಾಸಕಿ ಕರೆಮ್ಮ ಜಿ. ನಾಯಕ ಅವರು ಕ್ಷೇತ್ರದ ಅಭಿವೃದ್ಧಿ ವಿಚಾರದಲ್ಲಿ ಇತಿಹಾಸ ಹಾಗೂ ವಾಸ್ತವಾಂಶಗಳನ್ನು ಗಮನದಲ್ಲಿಟ್ಟುಕೊಂಡು ಮಾತನಾಡಬೇಕು. ನಾರಾಯಣಪುರ ಅಣೆಕಟ್ಟು ನಿರ್ಮಾಣ ಹಾಗೂ ಅದರ ಆಧಾರದ ಮೇಲೆ ರೂಪುಗೊಂಡ ನೀರಾವರಿ ವ್ಯವಸ್ಥೆಗಳ ನಿರ್ಮಾಣ ಮತ್ತು ಅಭಿವೃದ್ಧಿಯಲ್ಲಿ ಹಿಂದಿನ ಕಾಂಗ್ರೆಸ್ ಸರ್ಕಾರಗಳ ಪಾತ್ರವನ್ನು ಮರೆಯಬಾರದು ಎಂದು ಕಾಂಗ್ರೆಸ್ ಪರಿಶಿಷ್ಟ ಪಂಗಡ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಮಮತಾ ಪ್ರಭು ದೊರೆ ಹೇಳಿದರು.

ದೇವದುರ್ಗ ಭಾಗಕ್ಕೆ ನೀರು ತಲುಪಿಸುವ ವ್ಯವಸ್ಥೆ ರೂಪುಗೊಳ್ಳಲು ಹಿಂದಿನ ಸರ್ಕಾರಗಳ ನೀರಾವರಿ ಯೋಜನೆಗಳು ಪ್ರಮುಖ ಕಾರಣವಾಗಿವೆ. ಆದ್ದರಿಂದ ಇತಿಹಾಸ ಮತ್ತು ವಾಸ್ತವಾಂಶಗಳನ್ನು ಅರಿತುಕೊಂಡು



ಸರ್ಕಾರದ ವಿರುದ್ಧ ಆರೋಪ ಮಾಡುವುದು ಸೂಕ್ತ ಎಂದು ಅವರು ಅಭಿಪ್ರಾಯಪಟ್ಟರು. ಶಾಸಕರ ಜವಾಬ್ದಾರಿ ಕೇವಲ ಸರ್ಕಾರದ ಮೇಲೆ ಆರೋಪ ಮಾಡುವುದಕ್ಕೆ ಸೀಮಿತವಾಗಿಲ್ಲ. ಅಧಿಕಾರಿಗಳಿಂದ ಸಮರ್ಪಕವಾಗಿ ಕೆಲಸ ಮಾಡಿಸುವುದು, ಅಭಿವೃದ್ಧಿ ಕಾಮಗಾರಿಗಳ ಮೇಲ್ವಿಚಾರಣೆ ನಡೆಸುವುದು, ಜನರ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವುದು ಹಾಗೂ ಕ್ಷೇತ್ರದ ಆಡಳಿತವನ್ನು ಪರಿಣಾಮಕಾರಿಯಾಗಿ ಮುನ್ನಡೆಸುವುದು ಶಾಸಕರ ಪ್ರಮುಖ ಕರ್ತವ್ಯವಾಗಿದೆ. ಇದಕ್ಕಾಗಿ ಆಡಳಿತಾತ್ಮಕ ತಿಳುವಳಿಕೆ ಹಾಗೂ ನಿರಂತರ ಕಾಳಜಿ ಅಗತ್ಯ ಎಂದು ಹೇಳಿದರು.

"ನಾನು ಬಡವಿ, ನನ್ನ ಬಳಿ ಹಣ–ಅಂತಸ್ತಿಲ್ಲ" ಎಂದು ಪದೇಪದೇ ಭಾವನಾತ್ಮಕವಾಗಿ ಹೇಳುವುದಕ್ಕಿಂತ, ಜನರು ಈಗಾಗಲೇ ಅಧಿಕಾರ ನೀಡಿದ್ದು, ಆ ಅಧಿಕಾರವನ್ನು ಜನರ ಬದುಕು ಬದಲಿಸಲು ಬಳಸಬೇಕು. ಆರೋಪಗಳ ರಾಜಕೀಯಕ್ಕಿಂತ ಅಭಿವೃದ್ಧಿಯ ರಾಜಕೀಯಕ್ಕೆ ಆದ್ಯತೆ ನೀಡಬೇಕು ಎಂದು ಮಮತಾ ಪ್ರಭು ದೊರೆ ಒತ್ತಾಯಿಸಿದರು. ದೇವದುರ್ಗದ ಜನರಿಗೆ ಭಾವನಾತ್ಮಕ ಮಾತುಗಳಿಗಿಂತ ಕುಡಿಯುವ ನೀರು, ನೀರಾವರಿ, ಉತ್ತಮ ರಸ್ತೆ, ಶಿಕ್ಷಣ, ಉದ್ಯೋಗ, ಆರೋಗ್ಯ ಸೇವೆ ಸೇರಿದಂತೆ ಸಮಗ್ರ ಅಭಿವೃದ್ಧಿ ಅಗತ್ಯವಾಗಿದೆ. ಜನರು ಅಧಿಕಾರ ನೀಡಿದ್ದಾರೆ; ಇದೀಗ ಕೆಲಸ ಮಾಡಿ ತೋರಿಸುವ ಸಮಯ ಎಂದು ಅವರು ನೈಜ ದೆಸೆ ಕನ್ನಡ ದಿನಪತ್ರಿಕೆಯ ವರದಿಗಾರರೊಂದಿಗೆ ಮಾತನಾಡುತ್ತ ಹೇಳಿದರು.

2028ರ ಚುನಾವಣೆಯಲ್ಲಿ ದೇವದುರ್ಗದಲ್ಲಿ ಕಾಂಗ್ರೆಸ್‌ನ ಶಕ್ತಿ ಏನೆಂಬುದನ್ನು ತೋರಿಸಲಾಗುವುದು. ತಮ್ಮ ಮೇಲೆ ತಮಗೆ ವಿಶ್ವಾಸವಿದ್ದರೆ ರಾಜೀನಾಮೆ ನೀಡಿ ಪುನಃ ಜನರ ಮುಂದೆ ಚುನಾವಣೆಯನ್ನು ಎದುರಿಸಿ ತಮ್ಮ ಜನಪ್ರಿಯತೆಯನ್ನು ಸಾಬೀತುಪಡಿಸಲಿ ಎಂದು ಮಮತಾ ಪ್ರಭು ದೊರೆ ಸವಾಲು ಹಾಕಿದರು. ಮಮತಾ ಪ್ರಭು ದೊರೆ ರಾಜ್ಯ ಪ್ರಧಾನ ಕಾರ್ಯದರ್ಶಿ, ಪರಿಶಿಷ್ಟ ಪಂಗಡ ಘಟಕ, ಬೆಂಗಳೂರು

ಕೃಷಿ ಕಾಯಕಯೋಗಿ ತೋಟಕ್ಕೆ ಮಾಜಿ ಕೇಂದ್ರ ಸಚಿವ ಬಸನಗೌಡ ಪಾಟೀಲ ಯತ್ನಾಳ ಭೇಟಿ

❑ ನೈಜ್ಯ ದೆಸೆ ನ್ಯೂಸ್

ಕುಷ್ಟಗಿ: ತಾಲೂಕಿನ ಮದಲಗಟ್ಟಿ ಸಮೀಪದ ಕೃಷಿ ಕಾಯಕಯೋಗಿ ಡಾ. ದೇವೇಂದ್ರಪ್ಪ ಬಳೂಟಗಿ ಅವರ ತೋಟಕ್ಕೆ ಮಾಜಿ ಕೇಂದ್ರ ಸಚಿವ ಬಸನಗೌಡ ಪಾಟೀಲ ಯತ್ನಾಳ ಭೇಟಿ ನೀಡಿ, ವಿವಿಧ ಬೆಳೆಗಳು ಹಾಗೂ ತೋಟದ ಕೃಷಿ ಚಟುವಟಿಕೆಗಳನ್ನು ವೀಕ್ಷಿಸಿದರು.

ಡಾ. ದೇವೇಂದ್ರಪ್ಪ ಬಳೂಟಗಿ ಅವರು ತಮ್ಮ ತೋಟದಲ್ಲಿ ಶ್ರೀಗಂಧ, ತೇಗ, ಪಪ್ಪಾಯ, ಮಾವು, ದಾಳಿಂಬೆ, ಹುಣಸೆ, ತೆಂಗು, ಬಿದಿರು, ಪೇರಲೆ, ಮೂಸಂಬಿ, ಬೇವು, ರಕ್ತಚಂದನ ಹಾಗೂ ಕಿನೊ ಸೇರಿದಂತೆ ವಿವಿಧ ಜಾತಿಯ ಗಿಡಗಳನ್ನು ಬೆಳೆಸಿದ್ದಾರೆ.

ತೋಟದ ಹಚ್ಚಹಸಿರಿನ ವಾತಾವರಣದಲ್ಲಿ ಪಕ್ಷಿಗಳ ಕಲರವದೊಂದಿಗೆ ಇಲಿ, ಹಾವು, ಮುಂಗುಸಿ ಸೇರಿದಂತೆ ವಿವಿಧ ಜೀವಿಗಳ ಸಹಜ ಚಟುವಟಿಕೆಗಳು ಕಂಡುಬಂದವು. ಇದರಿಂದ ತೋಟದಲ್ಲಿ ಜೀವ ವೈವಿಧ್ಯತೆಯೂ ಉತ್ತಮವಾಗಿ ರೂಪುಗೊಂಡಿರುವುದು ಗಮನ ಸೆಳೆಯಿತು.

ಕೃಷಿ ಹೊಂಡದ ಪ್ರದೇಶದಲ್ಲಿ ಕುಳಿತು ತೋಟದ ಸುತ್ತಲೂ ದೃಷ್ಟಿ ಹಾಯಿಸಿದಾಗ ದಾಳಿಂಬೆ, ಮಾವು, ನೆಲ್ಲಿ ಸೇರಿದಂತೆ ವಿವಿಧ ಹಣ್ಣಿನ ಗಿಡಗಳಿಂದ ಕೂಡಿದ ಆಹ್ಲಾದಕರ ಪರಿಸರ ಕಂಡುಬಂತು. ಈ ಸಂದರ್ಭದಲ್ಲಿ ಡಾ. ದೇವೇಂದ್ರಪ್ಪ ಬಳೂಟಗಿ ಅವರು ತೋಟದಲ್ಲಿ ಬೆಳೆದಿರುವ ವಿವಿಧ ಗಿಡಗಳ ವಿಶೇಷತೆ, ಕೃಷಿ ಪದ್ಧತಿ ಹಾಗೂ ಅವುಗಳ ನಿರ್ವಹಣೆ ಕುರಿತು ಬಸನಗೌಡ ಪಾಟೀಲ ಯತ್ನಾಳ ಅವರಿಗೆ ವಿವರಿಸಿದರು. ಯತ್ನಾಳ ಅವರು ತೋಟದ ಕೃಷಿ ಚಟುವಟಿಕೆಗಳನ್ನು ವೀಕ್ಷಿಸಿ, ವಿವಿಧ ಬೆಳೆಗಳ ಕುರಿತು ಮಾಹಿತಿ ಪಡೆದುಕೊಂಡರು.

ಬಸನಗೌಡ ಪಾಟೀಲ ಯತ್ನಾಳ ಅವರು ತೋಟಕ್ಕೆ ಭೇಟಿ ನೀಡಿರುವ ಸುದ್ದಿ ತಿಳಿದು ಬಿಜೆಪಿ



ಮುಖಂಡ ಬಸವರಾಜ ಹಳ್ಳೂರ ನೇತೃತ್ವದಲ್ಲಿ ಪಕ್ಷದ ಕಾರ್ಯಕರ್ತರು ಭೇಟಿ ನೀಡಿ ಅವರನ್ನು ಸನ್ಮಾನಿಸಿದರು.

ಮಾರಣಾಂತಿಕ ರೇಬೀಸ್ ಕಾಯಿಲೆ ತಡೆಗೆಗಾಗಿ ಸಾಕಿದ ಅಥವಾ ಬೀದಿ ನಾಯಿ ಕಡಿದ ತಕ್ಷಣ ಹತ್ತಿರದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಿರಿ:

❑ ನೈಜ್ಯ ದೆಸೆ ನ್ಯೂಸ್

ರಾಯಚೂರು: ರೇಬೀಸ್ ಖಾಯಿಲೆ ಮಾರಣಾಂತಿಕವಾಗಿದ್ದು, ಸಾಕಿದ ಅಥವಾ ಬೀದಿ ನಾಯಿಯು ಕಡಿದರೆ ಅಥವಾ, ದೇಹದ ಮೇಲಿನ ಗಾಯವನ್ನು ನೆಕ್ಕಿದರೆ, ಉಗುರಿನಿಂದ ಪರಿಚಿದರೆ, ನಿರ್ಲಕ್ಷಿಸದೆ ತಕ್ಷಣವೇ ಗಾಯವನ್ನು ನೀರಿನಿಂದ ಚೆನ್ನಾಗಿ ತೊಳೆದು ಗಾಯಕ್ಕೆ ಏನನ್ನು ಹಚ್ಚದೆ, ಕೂಡಲೆ ಹತ್ತಿರವಿರುವ ಯಾವುದೇ ಸರಕಾರಿ ಅಸ್ಪತ್ರೆಗೆ ತೆರಳಿ ವೈದ್ಯರ ಸಲಹೆಯಂತೆ ಚಿಕಿತ್ಸೆ ಪಡೆಯಿರಿ ಎಂದು ಹರಿಜನವಾಡಾ ನಗರ ಪ್ರಾಥಮಿಕ ಆರೋಗ್ಯ ವೈದ್ಯರಾದ ಡಾ ಸುನೀಲ್ ತಿಳಿಸಿದರು.

ವಿಶ್ವ ರೇಬಿಸ್ ತಡೆ ದಿನದ ಅಂಗವಾಗಿ ರಾಯಚೂರು ನಗರದ ಹರಿಜನವಾಡಾ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯ ಗಾಜಗಾರಪೇಟ್ ಸರಕಾರಿ ಪ್ರೌಢಶಾಲೆಯಲ್ಲಿ ಮಕ್ಕಳಿಗೆ ಜಾಗೃತಿ ನೀಡಿ ಮಾತನಾಡುತ್ತಾ, ರೇಬೀಸ್ ಸೊಂಕು



ಹೊಂದಿದ ಬಾಯಿ, ಬೆಕ್ಕು, ಹೆಗ್ಗಣ ಇತರ ಪ್ರಾಣಿಗಳ ಕಚ್ಚುವಿಕೆಯು ಮಾರಣಾಂತಿಕವಾಗಿದ್ದು, ರೇಬೀಸ್ ಸೋಂಕು ಹೆಚ್ಚಿನ ಪ್ರಮಾಣದಲ್ಲಿ ನಾಯಿಗಳಲ್ಲಿ ಕಂಡು ಬರುವುದರಿಂದ ನಾಯಿ ಕಡಿದ ಮೊದಲ ದಿನವೇ ರೇಬೀಸ್ ನಿರೋಧಕ ಚುಚ್ಚುಮದ್ದು ಪಡೆಯುವುದು ನಂತರದಲ್ಲಿ ನಿಯಮದ ಪ್ರಕಾರ ಚುಚ್ಚುಮದ್ದು ಪಡೆಯುವುದು ಅತ್ಯಗತ್ಯವಾಗಿದೆ ಎಂದರು.

ಜಿಲ್ಲಾ ಅರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಮಾತನಾಡಿ, ನಾಯಿ ಕಡಿತದ ಗಾಯಕ್ಕೆ ಪಟ್ಟಿ ಕಟ್ಟಬಾರದು, ಯಾವುದೇ ನಾಟಿ ಔಷಧಿ ಕೊಡಿಸುವುದು, ನೀರು ಕುಡಿಸುವುದು, ದಾರ ಹಾಕಿಸುವಂಥ ಮೂಢನಂಬಿಕೆಯಂತಹ ತಪ್ಪುಗಳನ್ನು ಮಾಡಬಾರದು, ಅಲ್ಲದೆ ಮಕ್ಕಳನ್ನು ನಾಯಿಗಳ ಗುಂಪು ಇರುವಲ್ಲಿ ಆಟವಾಡಲು ಬಿಡಬಾರದು, ಹಾಗೆಯೆ ರಸ್ತೆಯ ಪಕ್ಕದಲ್ಲಿ ಎಲ್ಲೆಂದರಲ್ಲಿ ಆಹಾರದ ತ್ಯಾಜ್ಯವನ್ನು ಹಾಕಬಾರದು ಎಂದು ವಿನಂತಿಸಿದರು.

ಈ ಸಂದರ್ಭದಲ್ಲಿ ಉಪಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಬಸಯ್ಯ, ಜಿಲ್ಲಾ ಅರೋಗ್ಯ ಮೇಲ್ವಿಚಾರಣಾಧಿಕಾರಿ ಪುಂಡಲಿಕ ಗಂಜಿ, ಮುಖ್ಯೋಪಾಧ್ಯಾಯರಾದ ಎಸ್ ಬಾಬು, ಶಿಕ್ಷಕಿ ಪಾರ್ವತಿ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಸರೋಜಾ ಕೆ, ದೈಹಿಕ ಶಿಕ್ಷಕಿ ವೀಣಾ, ಆರೋಗ್ಯ ನೀರಿಕ್ಷಣಾಧಿಕಾರಿ ಮಹೇಂದ್ರ, ಪಿಹೆಚ್‌ಸಿಓ ಗಿರಿಜಾ, ಸೇರಿದಂತೆ ಆಶಾ ಕಾರ್ಯಕರ್ತೆಯರು ಶಾಲಾ ಮಕ್ಕಳು ಇದ್ದರು.

ಆತ್ಮಹತ್ಯೆ ತಡೆಗಟ್ಟುವ ಕುರಿತು ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮ

❑ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು, ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ವಿಭಾಗ ರಾಯಚೂರು, ಪ್ರಾಥಮಿಕ ಆರೋಗ್ಯ ಕೇಂದ್ರ ಜವಳಗೇರಾ ಹಾಗೂ ಸನ್ ರೈಸ್ ಪ್ಯಾರಾ ಮೆಡಿಕಲ್ ಕಾಲೇಜು ಸಿಂಧನೂರು ಇವರ ಸಂಯುಕ್ತ ಆಶ್ರಯದಲ್ಲಿ ಸನ್ ರೈಸ್ ಪ್ಯಾರಾ ಮೆಡಿಕಲ್ ಕಾಲೇಜಿನಲ್ಲಿ ಆತ್ಮಹತ್ಯೆ ತಡೆಗಟ್ಟುವ ಕುರಿತು ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದ ಮನೋಶಾಸ್ತ್ರಜ್ಞರು ಅರುಣ್ ಕುಮಾರ್ ಕುಲಕರ್ಣಿ ಮಾತನಾಡಿ, ಆತ್ಮಹತ್ಯೆ ತಡೆಗಟ್ಟುವಲ್ಲಿ ಯುವಕರ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ತಿಳಿಸಿದರು. ಇತ್ತೀಚಿನ ದಿನಗಳಲ್ಲಿ ಯುವಜನತೆಯಲ್ಲಿ ಆತ್ಮಹತ್ಯೆ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿರುವುದು



ಆತಂಕಕಾರಿ ಬೆಳವಣಿಗೆಯಾಗಿದ್ದು, ಜೀವನಶೈಲಿ ಹಾಗೂ ಜೀವನ ನಿರ್ವಹಣೆಗೆ ಸಂಬಂಧಿಸಿದ ಸವಾಲುಗಳನ್ನು ಸಮರ್ಥವಾಗಿ ಎದುರಿಸುವ ಮನೋಸ್ಥೈರ್ಯವನ್ನು ಬೆಳೆಸಿಕೊಳ್ಳಬೇಕು ಎಂದು ಹೇಳಿದರು. ಖಿನ್ನತೆ, ನಿರಾಶೆ ಹಾಗೂ ಒತ್ತಡದಂತಹ ಸಮಸ್ಯೆಗಳನ್ನು ಗುರುತಿಸಿ, ಅಗತ್ಯವಿದ್ದಲ್ಲಿ ನೆರವು ಪಡೆಯುವುದರ ಜೊತೆಗೆ ಸಂಕಷ್ಟದಲ್ಲಿರುವವರಿಗೆ ಸಹಾಯ ಮಾಡುವ ಮನೋಭಾವವನ್ನು ಬೆಳೆಸಿಕೊಳ್ಳಬೇಕೆಂದು ಕರೆ ನೀಡಿದರು.

ನಂತರ ಮಾತನಾಡಿದ ಕ್ಷೇತ್ರ ಆರೋಗ್ಯ



ಶಿಕ್ಷಣಾಧಿಕಾರಿ ಬಾಲಪ್ಪ ನಾಯಕ ಅವರು, ಸಮುದಾಯದಲ್ಲಿ ಹೆಚ್ಚುತ್ತಿರುವ ಆತ್ಮಹತ್ಯೆ ಪ್ರಕರಣಗಳನ್ನು ತಡೆಗಟ್ಟಲು ಪ್ರತಿಯೊಬ್ಬರಲ್ಲೂ ಜಾಗೃತಿ ಮೂಡಿಸಬೇಕಾಗಿದೆ ಎಂದು ಹೇಳಿದರು. ಬರಗಾಲ, ಆರ್ಥಿಕ ಸಂಕಷ್ಟ, ವೈಯಕ್ತಿಕ ಹಾಗೂ ಸಾಮಾಜಿಕ ಒತ್ತಡಗಳಿಂದ ರೈತರು, ಯುವಕರು, ವಿದ್ಯಾರ್ಥಿಗಳು ಹಾಗೂ ನೌಕರರಲ್ಲಿ ಆತ್ಮಹತ್ಯೆಯಂತಹ ಆಲೋಚನೆಗಳು ಮೂಡುವ ಸಾಧ್ಯತೆಗಳಿದ್ದು, ಅವುಗಳನ್ನು ಧೈರ್ಯದಿಂದ ಎದುರಿಸುವ ಶಕ್ತಿಯನ್ನು ಪ್ರತಿಯೊಬ್ಬರೂ ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಆತ್ಮಹತ್ಯೆ ತಡೆಗಟ್ಟುವ ಪ್ರತಿಜ್ಞಾವಿಧಿಯನ್ನು ಬೋಧಿಸಲಾಯಿತು.

"ನನ್ನ ಕುಟುಂಬದವರು, ಸ್ನೇಹಿತರು ಹಾಗೂ ಸಹೋದ್ಯೋಗಿಗಳ ಮಾನಸಿಕ ಆರೋಗ್ಯದ ಕಡೆ ಗಮನ ಹರಿಸುತ್ತೇನೆ. ಯಾರಾದರೂ ಸಂಕಷ್ಟದಲ್ಲಿದ್ದರೆ 'ನೀವು ಹೇಗಿದ್ದೀರಿ? ನಾನು ನಿಮಗೆ ಹೇಗೆ ಸಹಾಯ ಮಾಡಲಿ?' ಎಂದು ಪ್ರೀತಿಯಿಂದ ವಿಚಾರಿಸುತ್ತೇನೆ. ಜೀವನದಲ್ಲಿ ಕಠಿಣ ಸಂದರ್ಭಗಳು ಎದುರಾದಾಗ ಸಹಾಯ ಪಡೆಯಲು ಹಿಂಜರಿಯುವುದಿಲ್ಲ. ಮಾದಕ ವಸ್ತುಗಳು ಹಾಗೂ ಮದ್ಯಪಾನದಿಂದ ದೂರವಿರುತ್ತೇನೆ. ಆತ್ಮಹತ್ಯೆ ತಡೆಗಟ್ಟುವ ಕುರಿತು ಎಲ್ಲೆಡೆ ಜಾಗೃತಿ ಮೂಡಿಸಲು ಶ್ರಮಿಸುತ್ತೇನೆ" ಎಂದು ವಿದ್ಯಾರ್ಥಿಗಳು ಪ್ರತಿಜ್ಞೆ ಸ್ವೀಕರಿಸಿದರು. ಕಾರ್ಯಕ್ರಮದಲ್ಲಿ ಪ್ರಾಥಮಿಕ ಆರೋಗ್ಯ ಸುರಕ್ಷತಾ ಅಧಿಕಾರಿ ಲಕ್ಷ್ಮೀದೇವಿ, ಕಾಲೇಜಿನ ಪ್ರಾಚಾರ್ಯರು, ಉಪನ್ಯಾಸಕರು, ಆಶಾ ಕಾರ್ಯಕರ್ತೆಯರು, ಸನ್ ರೈಸ್ ಪ್ಯಾರಾ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

ನೇಮಕಾತಿ ಪ್ರಕಟಣೆ

KEA ನೇಮಕಾತಿ 2026-4699 ತಾಂತ್ರಿಕ ಮತ್ತು ತಾಂತ್ರಿಕೇತರ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಸೆಪ್ಟೆಂಬರ್ 29, 2026

KEA ನೇಮಕಾತಿ 2026: 4699 FDA, SDA, ತಾಂತ್ರಿಕ, ತಾಂತ್ರಿಕೇತರ ಮತ್ತು 'ಗ್ರೂಪ್ ಸಿ' (Group C) ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕರ್ನಾಟಕ ಸರ್ಕಾರದಲ್ಲಿನ ವಿವಿಧ ಇಲಾಖೆಗಳಲ್ಲಿ ಈಆಂ, ಖಆಂ, ತಾಂತ್ರಿಕ, ತಾಂತ್ರಿಕೇತರ ಮತ್ತು 'ಗ್ರೂಪ್ ಸಿ' ಹುದ್ದೆಗಳನ್ನು ಭರ್ತಿ ಮಾಡಲು, ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (KEA) ಸೆಪ್ಟೆಂಬರ್ 2026ರ ಅಧಿಕೃತ ಅಧಿಸೂಚನೆಯ ಮೂಲಕ ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಕರ್ನಾಟಕ ಸರ್ಕಾರದಲ್ಲಿ ಉದ್ಯೋಗವನ್ನು ಬಯಸುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಅರ್ಜಿ ಪ್ರಕ್ರಿಯೆ ಪ್ರಾರಂಭವಾದ ನಂತರ ಆಸಕ್ತ ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅಧಿಕೃತ ಅಧಿಸೂಚನೆ ಬಿಡುಗಡೆಯಾದ ನಂತರ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು ನವೀಕ-ರಿಸಲಾಗುತ್ತದೆ. ಅಧಿಕೃತ ವೆಬ್‌ಸೈಟ್: cetonline.karnataka.gov.in

ಆರೋಗ್ಯವಂತ ಹೃದಯವೇ ಆನಂದಮಯ ಜೀವನದ ಅಡಿಪಾಯ: ಗೀತಾ ಹಿರೇಮಠ ಕರೆ ಸಿಂಧನೂರಿನಲ್ಲಿ ವಿಶ್ವ ಹೃದಯ ದಿನಾಚರಣೆ ಹಾಗೂ ಸಾರ್ವಜನಿಕ ಜಾಗೃತಿ ಕಾರ್ಯಕ್ರಮ

❑ ನೈಜ್ಯ ದೇಸಿ ನ್ಯೂಸ್

ಸಿಂಧನೂರು: "ಆರೋಗ್ಯವಂತ ಹೃದಯವೇ ಆನಂದಮಯ ಜೀವನದ ಅಡಿಪಾಯ. ನಿಮ್ಮ ಹೃದಯದ ಕಾಳಜಿ ವಹಿಸಿ, ಸದಾ ಆರೋಗ್ಯವಾಗಿರಿ" " ವಿಶ್ವ ಹೃದಯ ದಿನಾಚರಣೆ ಕಾರ್ಯಕ್ರಮ" ನಗರದ ವೆಂಕಟೇಶ್ವರ್ ಕಾಲೋನಿಯಲ್ಲಿ ಸಾರ್ವಜನಿಕರಿಗೆ ಹೃದಯದ ಆರೋಗ್ಯ ಕುರಿತು ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ರಾಯಚೂರು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು, ತಾಲೂಕು ಆರೋಗ್ಯಾಧಿಕಾರಿಗಳ ಕಾರ್ಯಾಲಯ ಸಿಂಧನೂರು ಹಾಗೂ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ, ಸಿಂಧನೂರು ಇವರ ಸಂಯುಕ್ತಾಶ್ರಯದಲ್ಲಿ. ಸೆಪ್ಟೆಂಬರ್ 30 ೦ಏ ಗೋಪಾಲ ನಗರದಲ್ಲಿ ಹೃದಯಕ್ಕೆ ಸಂಬಂದಿಸಿದ ಕಾರ್ಯಕ್ರಮದಲ್ಲಿ ಶ್ರೀಮತಿ ಗೀತಾ ಹಿರೇಮಠ ತಾಲೂಕು ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳು ಮಾತನಾಡಿ ಸಾರ್ವಜನಿಕರಲ್ಲಿ ಹೃದಯದ ಆರೋಗ್ಯ, ನಿಯಮಿತ ತಪಾಸಣೆ ಹಾಗೂ ಹೃದಯ



ಸಂಬಂಧಿ ಕಾಯಿಲೆಗಳ ತಡೆಗಟ್ಟುವಿಕೆ ಕು-ರಿತು ಜಾಗೃತಿ ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ನಮ್ಮ ಆರೋಗ್ಯದ ದೃಷ್ಟಿಯಿಂದ ಅತ್ಯಂತ ಪ್ರಮುಖವಾಗಿದೆ ಮಾನವನ ದೇಹದಲ್ಲಿ ಹೃದಯವು ಒಂದು ಪ್ರಮುಖ ಅಂಗವಾಗಿದ್ದು ಇದು ನಿರಂತರವಾಗಿ ರಕ್ತವನ್ನು ಪಂಪು ಮಾಡುವ ಮೂಲಕ ದೇಹಕ್ಕೆ ಆಮ್ಲಜನಕ ಮತ್ತು ಪೋಷಕಾಂಶಗಳನ್ನು ಪೂರೈಸುತ್ತದೆ ಹೃದಯ ಸಂಬಂಧಿ ಕಾಯಿಲೆಗಳಿಂದ ದೂರವಿರಲು ದೈನಂದಿನ ಜೀವನದಲ್ಲಿ ಆರೋಗ್ಯಕರ ಜೀವನ ಶೈಲಿಯನ್ನು ಅಳವಡಿಸಿಕೊಳ್ಳಬೇಕು ಆರೋಗ್ಯಕರ ಆಹಾರ ದೈಹಿಕ ಚಟುವಟಿಕೆ ದುರಭ್ಯಾಸಗಳನ್ನುತೇಜಿಸಬ 'ೀಕು,ಮಾನಸಿಕ ಒತ್ತಡ ನಿರ್ವಹಣೆ, ಎಲ್ಲಾವನ್ನು ಅಳವಡಿಸಿಕೊಳ್ಳುವುದು ಮುಖ್ಯವಾಗಿದೆ ಹೃದಯಘಾತದ ಲಕ್ಷಣಗಳು ಕಂಡು ಬಂದರೆ ಎದೆಯ ಭಾಗದಲ್ಲಿ ತೀವ್ರವಾದ ನೋವು ಒತ್ತಡ ಅಥವಾ ಉರಿ ಕಾಣಿಸಿಕೊಳ್ಳುವುದು ಇನ್ನು ಎಡಗೈ ಕುತ್ತಿಗೆ ದವಡೆ ಅಥವಾ ಬೆನ್ನಿನ ಭಾಗಕ್ಕೆ ಹರಡುವುದು ಅತಿಯಾಗಿ ಬೆವರುವುದು ಮತ್ತು ತಲೆ ತಿರುಗುವಿಕೆ ಉಸಿರಾಟದಲ್ಲಿ ತೊಂದರೆ ಎದುರಾಗುವುದು ಇವೆಲ್ಲ ಹೃದಯಕ್ಕೆ ಸಂಬಂಧಿಸಿದ ಲಕ್ಷಣಗಳಾಗಿವೆ

ಸಮತೋಲಿತ ಆಹಾರ ಸೇವನೆ ಮತ್ತು ಧೂಮಪಾನ/ಮದ್ಯಪಾನ ತ್ಯಜಿಸುವುದು. ಪ್ರತಿದಿನ ಕನಿಷ್ಠ 30 ನಿಮಿಷಗಳ ನಡಿಗೆ ಅಥವಾ ವ್ಯಾಯಾಮ. ರಕ್ತದೊತ್ತಡ (BP) ಮತ್ತು ಸಕ್ಕರೆ ಕಾಯಿಲೆ (Diabetes) ನಿಯಮಿತ ತಪಾಸಣೆ.

ಒತ್ತಡ ಮುಕ್ತ ಜೀವನಶೈಲಿಯನ್ನು ಅಳವಡಿಸಿಕೊಳ್ಳುವುದು ಪ್ರಮುಖವಾಗಿದೆ ನಿಮ್ಮ ಹೃದಯದ ಆರೋಗ್ಯದ ಬಗ್ಗೆ ಮತ್ತಷ್ಟು ತಿಳಿಯಲು ಅಥವಾ ಯಾವುದೇ ನಿರ್ದಿಷ್ಟ ಲಕ್ಷಣಗಳಿದ್ದರೆ ಹತ್ತಿರದ ಹೃದ್ರೋಗ ತಜ್ಞರನ್ನು ಸಂಪರ್ಕಿಸಿ ನಿಯಮಿತ ತಪಾಸಣೆ ಮಾಡಿಕೊಳ್ಳಬೇಕು ಎಂದು ತಿಸಲಾಯಿತು. ಈ ಸಂದರ್ಭದಲ್ಲಿ ಕಮಲಾ ಕಊಅಔ, ಅಮೃತಮ್ಮ ಕವಿತಾ ಆಶಾ ಕಾರ್ಯಕರ್ತೆಯರು, ಮಾದೇವಿ ಅಂಗನವಾಡಿ ಕಾರ್ಯಕರ್ತೆಯರು, ಫಾತಿಮಾ ಬೇಗಂ ಅಂಗನವಾಡಿ ಸಹಾಯಕಿ, ಸಾರ್ವಜನಿಕರು ಉಪಸ್ಥಿತರಿದ್ದರು.

ತಪ್ಪು ನಮೂದು ಆರೋಪ: ಜಾತಿ, ಆದಾಯ ಪ್ರಮಾಣಪತ್ರಕ್ಕಾಗಿ ಕಂಪ್ಲಿಯಲ್ಲಿ ಗಾಣಿಗ ಸಮಾಜದ ಒತ್ತಾಯ

❑ ನೈಜ್ಯ ದೇಸಿ ನ್ಯೂಸ್

ಬಳ್ಳಾರಿ / ಕಂಪ್ಲಿ : ಗಾಣಿಗ ಸಮಾಜದವ-ರಿಗೆ ಜಾತಿ ಪ್ರಮಾಣಪತ್ರ, ಆದಾಯಪತ್ರ ನೀಡಬೇಕಂದು ಆಗ್ರಹಿಸಿ, ಎಮ್ಮಿಗನೂರು ಗಾಣಿಗ ಸಮಾಜದ ನೇತೃತ್ವದಲ್ಲಿ ಗಾಣಿಗ ಸಮಾಜದವರು ಪಟ್ಟಣದ ತಹಶೀಲ್ದಾರ್ ಕಛೇರಿಯಲ್ಲಿ ತಹಶೀಲ್ದಾರ್ ಜೂಗಲ್ ಮಂಜುನಾಯಕಗೆ ಮಂಗಳವಾರ ಮನವಿ ಸಲ್ಲಿಸಿದರು.

ನಂತರ ಗಾಣಿಗ ಸಮಾಜದ ಜಿಲ್ಲಾಧ್ಯಕ್ಷ ಕಪ್ಪಗಲ್ ವಿರೇಶ ಮಾತನಾಡಿ, ಎಮ್ಮಿಗನೂರು ಗ್ರಾಮದ ಶೃತಿ ಗಾಣಿಗೇರ ತಂದೆ ಅಮರೇಶಪ್ಪ ಇವರ ಜಾತಿಯ ಬಗ್ಗೆ ತಾವುಗಳು ಖುದ್ದಾಗಿ ಬಂದು ಬೇರೆ ಜನಾಂಗದವರೊಡನೇ ಚರ್ಚೆ ಮಾಡಿರುವ ಸಮಯದಲ್ಲಿ ಅವರು ಗ್ರಾಮದಲ್ಲಿ ಗಾಣಿಗ ಜನಾಂಗದ ಸುಮಾರು 70-80 ಮನೆಗಳು ಇರುವುದಾಗಿ ತಿಳಿಸಿದರೂ ಅದನ್ನು ತಾವು ಪರಿಗಣನೆಗೆ ತೆಗೆದುಕೊಳ್ಳದೇ ವೀರಶೈವ ಲಿಂಗಾಯತ ಎಂದು ನಮೂದಿಸಿರುತ್ತೀರಿ. ಯಾವ ಆಧಾರದ ಮೇಲೆ ನಮೂದಿಸಿರುತ್ತೀರಿ, ಇಷ್ಟಲಿಂಗ ಪೂಜೆ ಮಾಡುವ ಸಲುವಾಗಿ, ನಾವು ತಿನ್ನುವ ಆಹಾರ ಪದ್ಧತಿಯನ್ನು ನೋಡಿ ಕೊಡುತ್ತಿಲ್ಲವೇ, ಇಲ್ಲ ನಮ್ಮ ಮನೆಯ ದೇವರನ್ನು ಪೂಜೆ ಮಾಡುವ ಸಲುವಾಗಿ ಕೊಡುತ್ತಿಲ್ಲವೇ ಹಾಗೂ ನಾವು ಮಾಡುವ ಶವಸಂಸ್ಕಾರ ನೋಡಿ ಕೊಡುತ್ತಿಲ್ಲವೇ.

ನೀವು ಕೊಟ್ಟಿರುವ ಪಂಚನಾಮದಲ್ಲಿ ಕಸೂನಿನ ವ್ಯಪ್ತಿಗೆ ಒಳಪಡುತ್ತದೆ ಎಂದು ನಮಗೆ ಮನವರಿಕೆ ಮಾಡಿಕೊಟ್ಟು, ಯಾವ ಆಧಾರದ ಮೇಲೆ ನಮ್ಮ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ನೀಡದೇ ತಿರಿಸ್ಕರಿಸಿದ್ದೀರಿ. ಇದನ್ನು ನಾವು ಖಂಡಿಸುತ್ತೇವೆ. ಕೂಡಲೇ ತಾವುಗಳು ಈ ಪತ್ರಕ್ಕೆ ಸ್ಪಂದಿಸಿ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ನೀಡಬೇಕೆಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯದರ್ಶಿ ಎ.ವಿರುಪಾಕ್ಷಪ್ಪ, ಖಜಾಂಚಿ ಹನುಮನಗೌಡ, ಮುಖಂಡರಾದ ಎಮ್ಮಿಗನೂರು ಗಾಣಿಗ ಸಮಾಜದ ಅಧ್ಯಕ್ಷ ಎಸ್.ಶರಣಬಸವನಗೌಡ,



ಮುಖಂಡರಾದ ಬಾವಿಕಟ್ಟೆ ವಿರೇಶ, ಎಸ್.ಜಿ.ಜಗದೀಶ, ಎಸ್.ರಾಜಶೇಖರಗೌಡ, ಕೆ.ಸತೀಶ, ಡಿ.ಈರಪ್ಪ, ನಾಗರಾಜ, ಎಸ್.ಬಸವರಾಜ, ದೇವರಮನೆ ಜಡೆಯಪ್ಪ, ರವಿ, ಗಾಣಿಗರ ತಿಪ್ಪೇಸ್ವಾಮಿ, ಡಿ.ನಾಗರಾಜ, ಜಡೇಶ, ಸಜ್ಜನರ ವಿಶ್ವನಾಥ, ಸಜ್ಜನರ ಶರಣಪ್ಪ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

ದೇವಸಮುದ್ರ-ನೆಲ್ಲುಡಿ ಮಾಗಣಿ ರಸ್ತೆ ಅಗಲೀಕರಣಕ್ಕೆ ರೈತರ ಆಗ್ರಹ: ತಹಶೀಲ್ದಾರ್‌ಗೆ ಮನವಿ

❑ ನೈಜ್ಯ ದೇಸಿ ನ್ಯೂಸ್

ಬಳ್ಳಾರಿ / ಕಂಪ್ಲಿ : ತಾಲೂಕಿನ ದೇವಸಮುದ್ರ ಗ್ರಾಮದ ಮುಖ್ಯ ರಸ್ತೆಯಿಂದ ನೆಲ್ಲುಡಿ ಮಾಗಾಣಿಗೆ ಸಂಪರ್ಕ ಕಲ್ಪಿಸುವ ರಸ್ತೆಯ ಒತ್ತುವರಿ ತೆರವುಗೊಳಿಸಿ, ಅಗಲೀಕರಣ ಮಾಡಬೇಕೆಂದು ಆಗ್ರಹಿಸಿ ರೈತರು ಮಂಗಳವಾರ ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ತಹಶೀಲ್ದಾರ್ ಜೂಗಲ್ ಮಂಜುನಾಯಕ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ರೈತ ಮುಖಂಡ ಕಡೆಮನೆ ಮಂಜುನಾಥ, "ಗ್ರಾಮದ 2ನೇ ವಾರ್ಡಿನ ಗುಂಡಮ್ಮನ ಬಾವಿಯಿಂದ ಹರಿಜನ ಹನುಮಂತಪ್ಪನ ಹೊಲದವರೆಗೆ ಇರುವ ಸಾರ್ವಜನಿಕ ರಸ್ತೆಯನ್ನು ಕೆಲವರು ಅತಿಕ್ರಮಣ ಮಾಡಿಕೊಂಡಿದ್ದಾರೆ. ಸುಮಾರು 2000 ಎಕರೆ ಕೃಷಿ ಭೂಮಿಗೆ ಸಂಪರ್ಕ ಕಲ್ಪಿಸುವ ಏಕೈಕ ಮಾರ್ಗ ಇದಾಗಿದ್ದು, ಒತ್ತುವರಿಯಿಂದಾಗಿ ನಿತ್ಯ ಸಂಚಾರಕ್ಕೆ ಭಾರಿ ತೊಂದರೆಯಾಗುತ್ತಿದೆ" ಎಂದು ದೂರಿದರು. "ಭತ್ತ ಮತ್ತು ಒಣಹುಲ್ಲು ಸಾಗಿಸುವ



ಟ್ರಾಕ್ಟರ್, ಲಾರಿಗಳು ಇದೇ ಮಾರ್ಗವಾಗಿ ಚಲಿಸಬೇಕಿದೆ. ಪ್ರಸ್ತುತ ಭತ್ತ ಕಟಾವು ಹಂಗಾಮು ಆರಂಭವಾಗುತ್ತಿರುವುದ-ರಿಂದ ರೈತರು ಮತ್ತು ಸಾರ್ವಜನಿಕರು ತೀವ್ರ ಟ್ರಾಫಿಕ್ ಸಮಸ್ಯೆ ಎದುರಿಸುತ್ತಿದ್ದಾರೆ.

ಅಲ್ಲದೆ, ರಸ್ತೆ ಕಿರಿದಾಗಿರುವುದರಿಂದ ಹರಿಜನ, ಭೋವಿಜನ, ಉಪ್ಪಾರು, ಕಣ್ಣೀರು ಸೇ-ರಿದಂತೆ ವಿವಿಧ ಜನಾಂಗದ ಮದುವೆ ಹಾಗೂ ಇತರ ಸಾಮಾಜಿಕ ಕಾರ್ಯಕ್ರಮಗಳಿಗೂ ಸಂಚಾರ ದುಸ್ತರವಾಗಿದೆ. ಈ ಬಗ್ಗೆ ಈಗಾಗಲೇ ಹಲವು ಬಾರಿ ಗ್ರಾಮ ಪಂಚಾಯತಿಗೆ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ" ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು. ಸದ್ಯ ಕಲ್ಯಾಣ ಕರ್ನಾಟಕ ಯೋಜನೆಯಡಿ ದೇವಸಮುದ್ರ ಗ್ರಾಮದ ಮುಖ್ಯ ರಸ್ತೆಯಿಂದ ಹೈಟೆಕ್ ಶೌಚಾಲಯದವರೆಗೆ ಸಿಸಿ ರಸ್ತೆ ನಿರ್ಮಾಣಕ್ಕೆ ಅನುಮೋದನೆ ದೊರೆತಿದೆ.

ಆದರೆ, ಈ ರಸ್ತೆ ಅಭಿವೃದ್ಧಿ ಕಾಮಗಾರಿ ಆರಂಭಿಸುವ ಮುನ್ನವೇ ಅಧಿಕಾ-ರಿಗಳು ಸ್ಥಳಕ್ಕೆ ಬಂದು ಪರಿಶೀಲನೆ ನಡೆಸಬೇಕು. ತಕ್ಷಣವೇ ಒತ್ತುವರಿ ಜಾಗವನ್ನು ತೆರವುಗೊಳಿಸಿ ರಸ್ತೆಯನ್ನು ಅಗಲೀಕರಣ ಮಾಡಿದ ಬಳಿಕವೇ ರಸ್ತೆ ಅಭಿವೃದ್ಧಿ ಪಡಿಸಬೇಕು ಎಂದು ರೈತರು ಕಳಕಳಿಯ ಮನವಿ ಮಾಡಿದ್ದಾರೆ. ಮನವಿ ಸಲ್ಲಿಕೆ ಸಂದರ್ಭದಲ್ಲಿ ರೈತ ಮುಖಂಡರಾದ ಪರಮೇಶ್ವರ, ನೀಲಕಂಠಪ್ಪ, ಹೆಚ್.ಗುಂಡಪ್ಪ, ಹೊನ್ನೂರಪ್ಪ, ವೆಂಕಟೇಶ, ದೊಡ್ಡಬಸುವ, ಪಂಪಾಪತಿ, ಸಣಾಪುರ ರುದ್ರಪ್ಪ, ರಾಮಣ್ಣ, ಹನುಮೇಶ ಸೇ-ರಿದಂತೆ ಪಟ್ಟಣದ ಪ್ರಮುಖರು ಹಾಗೂ ರಸ್ತೆ ಆಶ್ರಿತ ರೈತರು ಉಪಸ್ಥಿತರಿದ್ದರು.

ಶ್ರೀ ಅಮರನಾಥೇಶ್ವರ ಮಹಾದೇವ ಮಠಕ್ಕೆ ಬಸನಗೌಡ ಪಾಟೀಲ ಯತ್ನಾಳ ಭೇಟಿ

❑ ನೈಜ್ಯ ದೇಸಿ ನ್ಯೂಸ್

ಕುಷ್ಟಗಿ: ಧಾರ್ಮಿಕ ಹಾಗೂ ಆಧ್ಯಾತ್ಮಿಕ ಕಾರ್ಯಗಳಿಗೆ ಹೆಸರುವಾಸಿಯಾಗಿರುವ ತಾಲೂಕಿನ ಮದಲಗಟ್ಟಿ ಸಮೀಪದ ಶ್ರೀ ಅಮರನಾಥೇಶ್ವರ ಮಹಾದೇವ ಮಠ ನಾಗಸಾಧು ಆಶ್ರಮಕ್ಕೆ ಮಾಜಿ ಕೇಂದ್ರ ಸಚಿವ ಬಸನಗೌಡ ಪಾಟೀಲ ಯತ್ನಾಳ ಭೇಟಿ ನೀಡಿದರು.



ಈ ಸಂದರ್ಭದಲ್ಲಿ ಶ್ರೀಮಠದಲ್ಲಿ ಲೋಕಕಲ್ಯಾಣಕ್ಕಾಗಿ ವಿಶೇಷ ಪೂಜೆ ಸಲ್ಲಿಸಿ, ನಾಡಿಗೆ ಒಳಿತಾಗಲಿ, ಜನರಿಗೆ ಸುಖ-ಶಾಂತಿ, ಸಮೃದ್ಧಿ ದೊರೆಯಲಿ ಎಂದು ಪ್ರಾರ್ಥಿಸಿದರು. ಬಳಿಕ ಶ್ರೀಮಠದ ಪೀಠಾಧಿಕಾರಿಗಳಾದ ಶ್ರೀಮಹಂತ ಸಹದೇವನಂದಗಿರಿ ಮಹಾರಾಜರ ದರ್ಶನ ಪಡೆದು ಆಶೀರ್ವಾದ ಪಡೆದರು. ಯತ್ನಾಳ ಅವರು ಮಠಕ್ಕೆ ಭೇಟಿ ನೀಡಿರುವ ಸುದ್ದಿ ತಿಳಿಯುತ್ತಿದ್ದಂತೆ ಬಿಜೆಪಿ ಮುಖಂಡ ಬಸವರಾಜ ಹಳ್ಳೂರ ಸೇರಿದಂತೆ ಅವರ ಹಿತೈಷಿಗಳು, ಕಾರ್ಯಕರ್ತರು ಹಾಗೂ ಅಭಿಮಾನಿಗಳು ಮಠಕ್ಕೆ ಆಗಮಿಸಿ ಯತ್ನಾಳ ಅವರನ್ನು ಸನ್ಮಾನಿಸಿದರು. ಈ ಸಂದರ್ಭದಲ್ಲಿ ಶ್ರೀಮಠದ ಪದಾಧಿಕಾ-ರಿಗಳು ಹಾಗೂ ಭಕ್ತರು ಉಪಸ್ಥಿತರಿದ್ದರು.



ಮದ್ಯ ವ್ಯಸನ ನಿಯಂತ್ರಣಕ್ಕೆ ಸಾರ್ವಜನಿಕರ ಸಹಭಾಗಿತ್ವ ಅಗತ್ಯ ಸಿಪಿಐ ವಿಶ್ವನಾಥ ಹಿರೇಗೌಡ

❑ ನೈಜ್ಯ ದೇಸಿ ನ್ಯೂಸ್

ಕುಷ್ಟಗಿ: ಮದ್ಯ ವ್ಯಸನ ನಿಯಂತ್ರಣ-ಕ್ಕೆ ಸಾರ್ವಜನಿಕರ ಸಹಭಾಗಿತ್ವ ಅತ್ಯಗತ್ಯವಾಗಿದ್ದು, ಜನರು ಒಗ್ಗಟ್ಟಿನಿಂದ ಪ್ರಯತ್ನಿಸಿದರೆ ಗ್ರಾಮವನ್ನು ಸಂಪೂರ್ಣ ಮದ್ಯಮುಕ್ತಗೊಳಿಸಲು ಸಾಧ್ಯ ಎಂದು ಸಿಪಿಐ ವಿಶ್ವನಾಥ ಹಿರೇಗೌಡ ಹೇಳಿದರು.

ತಾಲೂಕಿನ ಕಂದಕೂರು ಗ್ರಾಮದ ಶ್ರೀ ಮಾರುತೇಶ್ವರ ದೇವಸ್ಥಾನದ ಆವರಣದಲ್ಲಿ ಕಂದಕೂರು ಗ್ರಾಮ ಪಂಚಾಯಿತಿ ಸಹಯೋಗದಲ್ಲಿ ಮದ್ಯಮುಕ್ತ ಗ್ರಾಮ ಸಂಕಲ್ಪದ ಹಿನ್ನೆಲೆಯಲ್ಲಿ ನಡೆದ ಪೂರ್ವಭಾವಿ ಜಾಗೃತಿ ಸಭೆಯಲ್ಲಿ ಅವರು ಮಾತನಾಡಿದರು. ಕೊಪ್ಪಳ ಗಾಂಧಿ ಬಳಗವು ಪ್ರತಿವರ್ಷ ಜಿಲ್ಲೆಯ ಒಂದು ಗ್ರಾಮವನ್ನು ಆಯ್ಕೆ ಮಾಡಿಕೊಂಡು, ಗಾಂಧಿ ನಡಿಗೆ ಹಾಗೂ ವಿವಿಧ ಜಾಗೃತಿ ಕಾರ್ಯಕ್ರಮಗಳ ಮೂಲಕ ಆ ಗ್ರಾಮವನ್ನು ಸಂಪೂರ್ಣ ಮದ್ಯಮುಕ್ತಗೊಳಿಸುವ ನಿಟ್ಟಿನಲ್ಲಿ ಅಭಿಯಾನ ನಡೆಸುತ್ತಿದೆ. ಈ ಬಾರಿ ನಾಲ್ಕನೇ ಗ್ರಾಮವಾಗಿ ಕಂದಕೂರನ್ನು ಆಯ್ಕೆ ಮಾಡಲಾಗಿದೆ. ಇದರ ಅಂಗವಾಗಿ ಅ.2ರಂದು ಕುಷ್ಟಗಿಯಿಂದ ಕಂದಕೂರಿನವರೆಗೆ ಗಾಂಧಿ ನಡಿಗೆ ಪಾದಯಾತ್ರೆ ಹಮ್ಮಿಕೊಳ್ಳಲು ನಿರ್ಧ-ರಿಸಲಾಗಿದೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ



ಭಾಗವಹಿಸಿ ಮದ್ಯ ವ್ಯಸನಿಗಳ ಮನಪರಿವರ್ತನೆಗೆ ಸಹಕರಿಸಬೇಕು ಎಂದು ಮನವಿ ಮಾಡಿದರು.

ಮದ್ಯ ಮಾರಾಟ ಸಂಪೂರ್ಣ ಸ್ಥಗಿತಗೊಳ್ಳಬೇಕು ಗ್ರಾಮದಲ್ಲಿ ಮದ್ಯ ಮಾರಾಟ ಸಂಪೂರ್ಣವಾಗಿ ಸ್ಥಗಿತಗೊಳ್ಳಬೇಕು ಎಂಬುದು ವಿಶೇಷವಾಗಿ ಮಹಿಳೆಯರ ಆಶಯವಾಗಿದೆ. ಕಂದಕೂರನ್ನು ಮಾದರಿ ಮದ್ಯಮುಕ್ತ ಗ್ರಾಮವನ್ನಾಗಿ ರೂಪಿಸಲು ಎಲ್ಲರೂ ಕೈಜೋಡಿಸಬೇಕು ಎಂದು ಸಭೆಯಲ್ಲಿ ಅಭಿಪ್ರಾಯ ವ್ಯಕ್ತವಾಯಿತು.

ಗಾಂಧಿ ಬಳಗದ ಸದಸ್ಯ ಮಲ್ಲಪ್ಪ ಸವಡಿ ಮಾತನಾಡಿ, ದುಡಿಮೆಯಿಂದ ಬರುವ ಆದ-ಾಯವನ್ನು ಮದ್ಯಕ್ಕೆ ವ್ಯಯಿಸದೆ ಕುಟುಂಬ ನಿರ್ವಹಣೆ, ಮಕ್ಕಳ ಶಿಕ್ಷಣ ಸೇರಿದಂತೆ ಅಗತ್ಯ ಕಾರ್ಯಗಳಿಗೆ ಬಳಸಬೇಕು. ಮದ್ಯಕ್ಕೆ ಹಣ ವ್ಯಯಿಸುವುದರಿಂದ ಕುಟುಂಬಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕುವುದಲ್ಲದೆ, ಕುಟುಂಬದ ನೆಮ್ಮದಿಯೂ ಹಾಳಾಗುತ್ತದೆ ಎಂದರು. ಗಾಂಧಿ ಬಳಗದ ಸದಸ್ಯರು ಮಾತನಾಡಿ, ಯಾವುದೇ ಫಲಾಪೇಕ್ಷೆಯಿಲ್ಲದೆ ಪ್ರತಿವರ್ಷ ಒಂದೊಂದು ಗ್ರಾಮವನ್ನು ಆಯ್ಕೆ ಮಾಡಿಕೊಂಡು ಮದ್ಯಮುಕ್ತ ಅಭಿಯಾನ ನಡೆಸಲಾಗುತ್ತಿದೆ. ಈ ಹಿಂದೆ ಭಾನಾಪುರ, ಜಿನ್ನಾಳ ಹಾಗೂ ಹಟ್ಟಿ ಗ್ರಾಮಗಳಲ್ಲಿ ಪಾದಯಾತ್ರೆ ನಡೆಸಲಾಗಿದ್ದು, ಇದೀಗ ನಾಲ್ಕನೇ ಗ್ರಾಮವಾಗಿ ಕಂದಕೂರನ್ನು ಆಯ್ಕೆ ಮಾಡಲಾಗಿದೆ. ಕಂದಕೂರು ಸಂಪೂರ್ಣ ಮದ್ಯಮುಕ್ತ ಗ್ರಾಮವಾಗಿ ಸರ್ಕಾರದಿಂದ ಗಾಂಧಿ ಪುರಸ್ಕಾರ ಪಡೆಯುವಂತಾಗಬೇಕು ಎಂದು ಆಶಿಸಿದರು.

ಕಂದಕೂರಪ್ಪ ವಾಲ್ಮೀಕಿ ಮಾತನಾಡಿ, ಗ್ರಾಮದಲ್ಲಿ ಮದ್ಯ ಮಾರಾಟ ತಡೆಗಟ್ಟಲು ಹಲವು ಕ್ರಮಗಳನ್ನು ಕೈಗೊಂಡಿದ್ದರೂ ಮದ್ಯ ವ್ಯಸನ ಸಂಪೂರ್ಣವಾಗಿ ನಿಂತಿಲ್ಲ. ಇದರಿಂದ ಅನೇಕ ಕುಟುಂಬಗಳು ತೊಂದರೆ ಅನುಭವಿಸುತ್ತಿವೆ. ಮದ್ಯ ವ್ಯಸನದ ವಿರುದ್ಧ ಗ್ರಾಮಸ್ಥರು ಒಗ್ಗಟ್ಟಿನಿಂದ ಹೋರಾಡಬೇಕು ಎಂದರು. ಗಾಂಧಿ ಬಳಗದ ಪ್ರಾಣೇಶ ಪೂಜಾರ ಮಾತನಾಡಿ, ಅ.3ರಂದು ಕಂದಕೂರಿನಲ್ಲಿ ಪಾದಯಾತ್ರೆ ನಡೆಸಲು ಉದ್ದೇಶಿಸಲಾಗಿತ್ತು. ಆದರೆ ಬೆಂಗಳೂರಿನಲ್ಲಿ ಕುಷ್ಟಗಿ ತಾಲೂಕಿನ ನಾಲ್ಕು ಗ್ರಾಮಗಳು ಸೇರಿದಂತೆ ಕೊಪ್ಪಳ ಜಿಲ್ಲೆಯ ಏಳು ಗ್ರಾಮಗಳಿಗೆ ಗಾಂಧಿ ಪುರಸ್ಕಾರ ಪ್ರದಾನ ಮಾಡುವ ಕಾರ್ಯಕ್ರಮ ಇರುವ ಹಿನ್ನೆಲೆಯಲ್ಲಿ ಅ.2ರಂದು ಪಾದಯಾತ್ರೆ ನಡೆಸಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು.

ಗಾಂಧಿ ಬಳಗದ ಸಾವಿತ್ರಿ ಮುಜುಂದಾರ, ಗ್ರಾಮದ ಚಂದ್ರಹಾಸ, ಪಿಡಿಒ ಗಿರಿಮಲ್ಲಪ್ಪ ಶಿರಗುಂಪಿ, ಗಾಂಧಿ ಬಳಗದ ಸದಸ್ಯರಾದ ಗುರುರಾಜ ಹೊರಪೇಟೆ, ಮಲ್ಲಪ್ಪ ಹವಳಿ, ಪರಶುರಾಮ ದುರಗಪ್ಪ, ಶಿವಪ್ಪ ಹಡಪದ, ಪರಮೇಶ್ವರ ರೆಡ್ಡಿ ಪ್ಯಾಟಿ, ಗ್ರಾಮದ ಮಾಜಿ ಪ್ರಧಾನ ಶರಣಪ್ಪ ಬಿಜಕಲ್, ಬಸವರಾಜ ಕಾಮನೂರು, ಮಹಾಂತಯ್ಯ ಅರಳಿಮಠ, ವೀರೇಶ ಬಂಗಾರಶೆಟ್ಟರ್, ಅಭಿನಂದನ್ ಗೋಗಿ, ಬಿ.ಎಂ. ಜೋಷಿ, ಡಾ. ಜೀವನಸಾಜ್ ವಾಲಿಗಾರ, ನಟರಾಜ ಸೋನಾರ ಮಾರುತಿ ಪೂಜಾರ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ವಚನ ದರ್ಶನ

ಮನಕ್ಕೆ ನಾಚದ ವಚನ, ವಚನಕ್ಕೆ ನಾಚದ ಮನ!ಕುಂದು–ಹೆಚ್ಚ ನುಡಿವೆ. ಒಂದು ಮಾತಿನ ಗೆಲ್ಲಕ್ಕೆ ಹಿಡಿದು ಹೋರುವೆ,ಕೂಡಲಸಂಗಮ ಶರಣರ ಎನ್ನಾಳ್ದರೆಂಬೆ

ವಿಶ್ವಗುರು ಶ್ರೀ ಬಸವಣ್ಣನವರ ಪ್ರಸಿದ್ಧ ವಚನವಾಗಿದೆ. ಈ ವಚನವು ಮನಸ್ಸು ಮತ್ತು ಮಾತಿನ ನಡುವಿನ ಸಂಬಂಧ ಹಾಗೂ ಆಂತರಿಕ ಪ್ರಾಮಾಣಿಕತೆಯ ಬಗ್ಗೆ ತಿಳಿಸುತ್ತದೆ.

ಮನಕ್ಕೆ ನಾಚದ ವಚನ, ವಚನಕ್ಕೆ ನಾಚದ ಮನ
ನಾವು ಆಡುವ ಮಾತುಗಳು ನಮ್ಮ ಮನಸ್ಸಿಗೆ ನಾಚಿಕೆ ತರುವಂತಿ–ರಬಾರದು ಅಂದರೆ ಆಡುವುದೊಂದು, ಯೋಚಿಸುವುದೊಂದು ಇರಬಾರದು. ಅದೇ ರೀತಿ ನಮ್ಮ ಮನಸ್ಸು ಕೂಡ ನಾವು ಆಡುವ ಮಾತಿಗೆ ಸಂಕೋಚಪಡುವಂತೆ ನಡೆದುಕೊಳ್ಳಬಾರದು.

ಮನಸ್ಸು
ಮನಸ್ಸು ಮತ್ತು ಮಾತು ಒಂದೇ ಆಗಿರಬೇಕು.ಕುಂದು–ಹೆಚ್ಚ ನುಡಿವವುದು
ಮನುಷ್ಯನಾದವನು ತಪ್ಪು–ಒಪ್ಪುಗಳನ್ನು, ಇರುವುದನ್ನು ಇಲ್ಲದ್ದನ್ನು ಅರಿಯದೆ ಬೇಕಾಬಿಟ್ಟಿಯಾಗಿ ಮಾತನಾಡುತ್ತಾನೆ.

ಒಂದು ಮಾತಿನ ಗೆಲ್ಲಕ್ಕೆ ಹಿಡಿದು ಹೋರುವೆ
ಕೇವಲ ಮಾತಿನಲ್ಲಿ ಜಯಗಳಿಸುವುದಕ್ಕಾಗಿ, ವ್ಯರ್ಥ ವಾದ–ವಿವಾದಗಳಲ್ಲಿ ತೊಡಗಿ ಹೋರಾಡುತ್ತಿರುತ್ತೇವೆ.

ಕೂಡಲಸಂಗಮ ಶರಣರ ಎನ್ನಾಳ್ದರೆಂಬೆ
ಹೀಗೆ ನಡವಳಿಕೆಯಲ್ಲಿ ದೋಷವಿದ್ದರೂ ಕೂಡ, ಬಸವಣ್ಣನವರು ತಮ್ಮನ್ನು 'ಕೂಡಲಸಂಗಮದ ಶರಣರು ನನ್ನನ್ನು ಆಳಿದ್ದಾರೆ' ಎಂದುಕೊಳ್ಳಲು ಅರ್ಹನಾಗಿದ್ದೇನೆಯೇ ಎಂದು ತಮ್ಮ ಮನಸ್ಸನ್ನು ತಾವೇ ವಿಮರ್ಶಿಸಿಕೊಳ್ಳುತ್ತಾರೆ ಬಸವಾದಿ ಶರಣರ ವಚನಗಳು ಮನುಕುಲದ ದಾರಿದೀಪ ಶರಣು ಶರಣಾರ್ಥಿಗಳು.

ಪಂಪಯ್ಯಸ್ವಾಮಿ ಸಾಲಿಮಠ
ಅಂತರಗಂಗಿ–ಸಿಂಧನೂರು. 998094144

ಪಟ್ಟಣದ ಸ್ವಚ್ಛತೆಯಷ್ಟೇ ಪೌರ ಕಾರ್ಮಿಕರ ಆರೋಗ್ಯವೂ ಮುಖ್ಯ: ವೈದ್ಯಾಧಿಕಾರಿ ಡಾ. ಕನಕೇರಿ

❑ ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ : ಪಟ್ಟಣವನ್ನು ದಿನವಿಡೀ ಸ್ವಚ್ಛವಾಗಿಡುವ ಪೌರ ಕಾರ್ಮಿಕರ ಆರೋಗ್ಯ ಕಾಪಾಡುವುದು ಅತ್ಯಂತ ಮುಖ್ಯವಾಗಿದೆ ಎಂದು ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ರವೀಂದ್ರ ಕನಕೇರಿ ತಿಳಿಸಿದರು.

ಇಲ್ಲಿನ ಪುರಸಭೆ ಕಚೇರಿ ಆವರಣದಲ್ಲಿ ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬಳ್ಳಾರಿಯ ಜಿಲ್ಲಾ ಸರ್ವೇಕ್ಷಣಾ–ಎನ್‌ಸಿಡಿ ಘಟಕ, ಸ್ಥಳೀಯ ಪುರಸಭೆ ಹಾಗೂ ಕಂಪ್ಲಿ ಸಮುದಾಯ ಆರೋಗ್ಯ ಕೇಂದ್ರದ ಸಹಯೋಗದಲ್ಲಿ ಪೌರ ಕಾರ್ಮಿಕರಿಗಾಗಿ ಆಯೋಜಿಸಿದ್ದ ಎನ್‌ಸಿಡಿ ಕ್ಲಿನಿಕ್‌ನ ಉಚಿತ ಆರೋಗ್ಯ ತಪಾಸಣಾ ಶಿಬಿರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.



"ಪೌರ ಕಾರ್ಮಿಕರು ಪ್ರತಿದಿನ ಸಾರ್ವಜನಿಕರ ಆರೋಗ್ಯಕ್ಕಾಗಿ ಪಟ್ಟಣದ ಸ್ವಚ್ಛತೆಗೆ ಶ್ರಮಿಸುತ್ತಾರೆ. ಆದರೆ, ಅವರ ಸ್ವಂತ ಆರೋಗ್ಯವೂ ಅಷ್ಟೇ ಪ್ರಮುಖವಾಗಿದೆ. ಈ ನಿಟ್ಟಿನಲ್ಲಿ ಕಾರ್ಮಿಕರ ಹಿತದೃಷ್ಟಿಯಿಂದ ಉಚಿತ ಆರೋಗ್ಯ ತಪಾಸಣೆ ಹಮ್ಮಿಕೊಳ್ಳಲಾಗಿದ್ದು, ಪ್ರತಿಯೊಬ್ಬರೂ ಇದರ ಸದುಪಯೋಗ ಪಡೆದುಕೊಂಡು ಸ್ವಚ್ಛತೆಯೊಂದಿಗೆ ತಮ್ಮ ಆರೋಗ್ಯವನ್ನೂ ಕಾಪಾಡಿಕೊಳ್ಳಬೇಕು" ಎಂದು ಅವರು ಕರೆ ನೀಡಿದರು. ಕಾರ್ಯಕ್ರಮದಲ್ಲಿ ಪೌರ ಕಾರ್ಮಿಕರು ಸರದಿಯಲ್ಲಿ ನಿಂತು ತಪಾಸಣೆ ಒಳಪಟ್ಟರು. ಈ ಸಂದರ್ಭದಲ್ಲಿ ತಾಲೂಕು ಆರೋಗ್ಯ ಅಧಿಕಾರಿ ಡಾ. ಅರುಣ್‌ಕುಮಾರ್, ಪುರಸಭೆ ಹಿರಿಯ ಆರೋಗ್ಯ ನಿರೀಕ್ಷಕ ಪ್ರಕಾಶ್ ಬಾಬು, ವೈದ್ಯರಾದ ಡಾ. ಹಾರಿಕಾ, ಆಪ್ತ ಸಮಾಲೋಚಕ ಡಿ.ಎಂ. ಮಹಮ್ಮದ್, ಶುಶ್ರೂಷಕ ಅಧಿಕಾರಿ ಡಿ. ದೇವಣ್ಣ, ಎಲ್‌ಟಿಎ ಶೃತಿ ಕೋರಿ, ಡಿಇಒ ಚಂದ್ರಶೇಖರ್ ಹಾಗೂ ಪುರಸಭೆಯ ಪೌರ ಕಾರ್ಮಿಕರು ಉಪಸ್ಥಿತರಿದ್ದರು.

ಸಾಧನೆಯ ಹಾದಿಯಲ್ಲಿ ಕಂಪ್ಲಿಯ ಮಹಿಳೆಯರು:

ಅಂಜೂರದಿಂದ ಉದ್ಯೋಗ ಸೃಷ್ಟಿ

ಧರ್ಮಸ್ಥಳ ಯೋಜನೆ ನೆರವು: ಅಂಜೂರ ಸಂಘದ ಪೂಜಾರಾಣಿ–ಸುಧಾ ಯಶೋಗಾಥೆ

❑ ನೈಜ್ಯ ದೆಸೆ ನ್ಯೂಸ್

ಬಡಿಗೇರ್ ಜಿಲಾನಸಾಬ್

ಕಂಪ್ಲಿ: ಬಳ್ಳಾರಿ ಜಿಲ್ಲೆಯ ಕುರುಗೋಡು ತಾಲೂಕಿನಲ್ಲಿ ವರ್ಷದುದ್ದಕ್ಕೂ ಅಂಜೂರವನ್ನು (Fig) ಅತಿ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಲಾಗುತ್ತದೆ. ಇಲ್ಲಿನ ಸಿಹಿ ಅಂಜೂರ ಹಣ್ಣುಗಳಿಗೆ ಹೊರ ರಾಜ್ಯಗಳಲ್ಲೂ ಭಾರಿ ಬೇಡಿಕೆಯಿದ್ದು, ಪ್ರತಿದಿನ ಟ್ರಕ್‌ಗಳ ಮೂಲಕ ದೇಶದ ಮೂಲೆ ಮೂಲೆಗೆ ಸಾಗಿಸಲ್ಪಡುತ್ತವೆ. ಆದರೆ, ಅಂಜೂರ ಹಣ್ಣುಗಳು ಬಹುಬೇಗನೆ ಕೊಳೆಯುವುದ–ರಿಂದ (ಕಜಡ್ಝುಚಿಛಟಜ), ಇವುಗಳನ್ನು ದೀರ್ಘಕಾಲ ಸಂಗ್ರಹಿಸಿಡುವುದು ರೈತರಿಗೆ ದೊಡ್ಡ ಸವಾಲಾಗಿತ್ತು. ರೈತರ ಹಾಗೂ ಈ ಹಣ್ಣಿನ ಈ ಮಿತಿಯನ್ನು ಹತ್ತಿರದಿಂದ ಕಂಡ ಕಂಪ್ಲಿಯ ಶ್ರೀನಿವಾಸ ಕ್ಯಾಂಪ್‌ನ ಇಬ್ಬರು ಧೈರ್ಯಶಾಲಿ ಮಹಿಳೆಯರು ಅಂಜೂರದ ಭವಿಷ್ಯವನ್ನೇ ಬದಲಿಸುವಂತಹ ವಿಶಿಷ್ಟ ಉದ್ಯಮಕ್ಕೆ ಕೈಹಾಕಿ ಇಂದು ಯಶಸ್ವಿಯಾಗಿದ್ದಾರೆ.

ಸ್ವಸಹಾಯ ಸಂಘದ ನೆರವು – ಉದ್ಯಮಶೀಲತೆಯ ಕನಸು:
ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಡಿ (ಖಉಐಆಖಆಕ) ರಚನೆಯಾಗಿರುವ 'ಅಂಜೂರ' ಸ್ವಸಹಾಯ ಸಂಘದ ಸದಸ್ಯರಾದ ಪೂಜಾರಾಣಿ ಮತ್ತು ಕೆ. ಸುಧಾ ಎಂಬ ಉದ್ಯಮಶೀಲ ಮಹಿಳೆಯರೇ ಈ ಯಶೋಗಾಥೆಯ ರೂವಾರಿಗಳು. ಕೇವಲ ಹಣ್ಣಾಗಿ ಅಥವಾ ಜ್ಯೂಸ್ ರೂಪದಲ್ಲಿ ಮಾತ್ರ



ಬಳಕೆಯಾಗುತ್ತಿದ್ದ ಅಂಜೂರಕ್ಕೆ ಮೌಲ್ಯವರ್ಧನೆ (Value Addition) ಮಾಡಿ, ಗ್ರಾಹಕರು ಇಷ್ಟಪಡುವ ಸವಿಯಾದ ತಿಂಡಿಗಳ ರೂಪ ನೀಡುವ ವಿಶಿಷ್ಟ ಪ್ರಯತ್ನವನ್ನು ಇವರು ಕೈಗೊಂಡರು.

ಮೌಲ್ಯವರ್ಧನೆಯಲ್ಲಿ ಸಾಧಿಸಿದ ಯಶಸ್ಸು:
ಸಾಮಾನ್ಯವಾಗಿ ಹಣ್ಣಾದ ನಂತರ ಕೆಲವೇ ದಿನಗಳಲ್ಲಿ ಹಾಳಾಗುವ ಅಂಜೂರವನ್ನು ಸಂಸ್ಕರಿಸಿ, ಅದರಿಂದ ವೈವಿಧ್ಯಮಯ ತಿಂಡಿ–ತಿನಿಸುಗಳನ್ನು ತಯಾರಿಸುವ ತಂತ್ರಜ್ಞಾನ ಹಾಗೂ ಪಾಕವಿಧಾನವನ್ನು ಇವರು ಕಂಡುಕೊಂಡಿದ್ದಾರೆ.

ಇವರ ಈ ಪರಿಶ್ರಮದ ಫಲವಾಗಿ ಇಂದು ಅಂಜೂರದ ವಿಶಿಷ್ಟ ಪ್ರೊಡಕ್ಟ್‌ಗಳು ಮಾರುಕಟ್ಟೆಗೆ ಲಗ್ಗೆ ಇಡಲು ಸಿದ್ಧವಾಗಿವೆ. ಇದು ಹಣ್ಣುಗಳು ವ್ಯಥ–ರ್ಥವಾಗುವುದನ್ನು ತಡೆಯುವುದಲ್ಲದೆ, ದೀರ್ಘಕಾಲ ಬಾಳಿಕೆ ಬರುವಂತೆ ಮಾಡಿದೆ.

ಮಾದರಿಯಾದ ಗ್ರಾಮೀಣ ಮಹಿಳೆಯರು:
ಸ್ಥಳೀಯವಾಗಿ ಸಿಗುವ ಕೃಷಿ ಉತ್ಪನ್ನಕ್ಕೆ ವಾಣಿಜ್ಯ ಮತ್ತು ಆಧುನಿಕ ರೂಪ ನೀಡುವ ಮೂಲಕ ಪೂಜಾರಾಣಿ ಮತ್ತು ಕೆ. ಸುಧಾ ಅವರು ಗ್ರಾಮೀಣ ಭಾಗದ ಮಹಿಳೆಯರ ಸ್ವಾವಲಂಬನೆಗೆ ಸಾಕ್ಷಿಯಾಗಿದ್ದಾರೆ. ಕೃಷಿ ಆಧರಿತ ಸಣ್ಣ ಕೈಗಾರಿಕೆ ಅಥವಾ ಗೃಹ ಉದ್ಯಮವನ್ನು ಹೇಗೆ ಯಶಸ್ವಿಯಾಗಿ ಮುನ್ನಡೆಸಬಹುದು ಎಂಬುದಕ್ಕೆ ಇವರಿಬ್ಬರು ಇಂದಿನ ಯುವ ಪೀಳಿಗೆಗೆ ಮತ್ತು ಇತರ ಮಹಿಳಾ ಸಂಘಗಳಿಗೆ ಮಾದರಿಯಾಗಿದ್ದಾರೆ. ಕುರುಗೋಡು ಮತ್ತು ಕಂಪ್ಲಿ ಭಾಗದ ಅಂಜೂರ ಬೆಳೆಗಾರರ ಪಾಲಿಗೆ ಇವರ ಈ ನಡೆ ಹೊಸ ಭರವಸೆಯ ಬೆಳಕನ್ನು ಮೂಡಿಸಿದೆ.

ಯೋಜನೆಯ ಸಹಾಯ : ಪೂಜಾರಾಣಿ ಮತ್ತು ಕೆ. ಸುಧಾರವರಿಗೆ ತಯಾರಿಯ ಬಗ್ಗೆ ತರಬೇತಿಯನ್ನು ಬೆಂಗಳೂರಿನ ಕೃಷಿ ವಿಜ್ಞಾನ ಕೇಂದ್ರ ನೀಡಿದೆ. ಯಂತ್ರ, ಟ್ರೇ ಖರೀದಿಗೆ ಬೇಕಾದ ಹಣಕಾಸಿನ ವ್ಯವಸ್ಥೆ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಬ್ಯಾಂಕ್‌ನಿಂದ ಆಗಿದೆ. ಪರಿಣಾಮ ಇದೀಗ ಕಂಪ್ಲಿಯಲ್ಲಿ ಪೂಜಾ ರಾಣಿ ಮತ್ತು ಸುಧಾರವರು 'ನೇಚರ್ ಫಿಗ್ ಬಾರ್' ಎಂಬ ಹೆಸರಿನಲ್ಲಿ ಅಂಜೂರ ರೋಲ್ಸ್ ಅನ್ನು ತಯಾರಿಸುತ್ತಿದ್ದಾರೆ. ತಾವು ಸ್ವತಹ ದುಡಿಯುವ ಜೊತೆಗೆ ಮೂರು ಮಂದಿಗೆ ಕೆಲಸವನ್ನು ನೀಡಿದ್ದಾರೆ.

ಅಂಜೂರ ರೋಲ್ ಎಂಬ ಸಾವಯವ ತಿಂಡಿ : ಕಳೆದ ಐದು ವರ್ಷಗಳಿಂದ ಕುರುಗೋಡಿನಿಂದ ಗುಣಮಟ್ಟದ ಅಂಜೂರ ಹಣ್ಣನ್ನು ಕೆ.ಜಿ.ಗೆ ರೂ. 15ರಂತೆ ನೀಡಿ ಖರೀದಿಸುತ್ತಿದ್ದಾರೆ. ಕುರುಗೋಡುವಿನಲ್ಲಿ ಸರ್ವಋತುಗಳಲ್ಲೂ ರೋಲ್ಸ್ ತಯಾರಿಗೆ ಅಂಜೂರ ದೊರೆಯುತ್ತದೆ. ಹಣ್ಣನ್ನು ತಂದು ಚೆನ್ನಾಗಿ ಸ್ವಚ್ಛಗೊಳಿಸಿ ಅದರ ತಿರುಳಿನಿಂದ

ಯಂತ್ರದ ಮೂಲಕ ರಸ ತೆಗೆಯುತ್ತಾರೆ. ನಂತರ ಅದಕ್ಕೆ ಬೆಲ್ಲ ಹಾಕಿ ಟೀಗೆ ಹಾಕಿ 20 ತಾಸುಗಳ ಕಾಲ ಡೈಯರ್‌ನಲ್ಲಿಟ್ಟು ಒಣಗಿಸುತ್ತಾರೆ. ಆಗ ಅದು ನಸುಗಪ್ಪು ಬಣ್ಣಕ್ಕೆ ತಿರುಗುತ್ತದೆ. ನಂತರ ಡೆಯರ್‌ನಿಂದ ತೆಗೆದು ಬೆರಳುದ್ದಕ್ಕೆ ಕತ್ತರಿಸಿ ಅಂ–



ದವಾದ ಪ್ಯಾಕ್ ನಲ್ಲಿ ತುಂಬಿಸುತ್ತಾರೆ. 200 ಗ್ರಾಂ. ಬಾಕ್ಸ್ ವೊಂದರ ಬೆಲೆ ರೂ. 100. ರಾಸಾಯನಿಕ, ಸಿಹಿ, ಬಣ್ಣ, ಪರಿಮಳ, ರುಚಿಗೆ ಬೇಕಾದ ಪದಾಥ–ರ್ಗಗಳನ್ನು ಮಿಶ್ರಣ ಮಾಡದ ತಿಂಡಿಯನ್ನು ತಿನ್ನಬೇಕೆನ್ನುವವರಿಗೆ ಇದೊಂದು ಉತ್ತಮ

ಪ್ರತಿ ದಿನ 20 ಕೆ.ಜಿ.ಯಷ್ಟು ತಯಾ–ರಿಸುತ್ತಾರೆ. ಚೆನ್ನೈ, ಬೆಂಗಳೂರು, ಆಂಧ್ರ ಪ್ರದೇಶಗಳಲ್ಲಿ ಅಂಜೂರ ರೋಲ್‌ಗೆ ಬಹುಬೇಡಿಕೆಯಿದೆ. ಬಸ್ ಮೂಲಕ ಅಲ್ಲಿಗೆ ಕಳುಹಿಸುವ ವ್ಯವಸ್ಥೆಯೂ ಇದೆ. ಸುಮಾರು ಆರು ತಿಂಗಳುಗಳ ಕಾಲ ಇದು ಹಾಳಾಗುವುದಿಲ್ಲ. ಈ ಮಹಿಳಾಮಣಿಗಳ ಪ್ರಯತ್ನವನ್ನು ನಾವು ಪ್ರೋತ್ಸಾಹಿಸಬೇಕಾಗಿದೆ. ಉದ್ಯೋಗದ ಜೊತೆ ಇತರರ ಆರೋಗ್ಯದ ಬಗ್ಗೆ ಕಾಳಜಿಯನ್ನು ವಹಿಸುತ್ತಿರುವ ಇವರ ಸಾಧನೆ ನಿಜಕ್ಕೂ ಅಭಿನಂದನಾರ್ಹ. ಹೆಚ್ಚು ಪ್ರಚಾರ ದೊರೆಯದ ಕಾರಣ ತಯಾರಿಯ ಪ್ರಮಾಣದಲ್ಲಿ ಮಾರಾಟವಾಗುತ್ತಿಲ್ಲ ಎನ್ನುತ್ತಾರೆ ಸುಧಾರವರು.

ಯಾರಿಗಾದರೂ ಶುಭಾಶಯ ಕೋರಲು, ಹಬ್ಬ–ಹರಿದಿನಗಳಲ್ಲಿ ಅಂಗಡಿಗಳಲ್ಲಿ ದೊರೆಯುವ ಕೇಕ್. ಚಾಕಲೇಟ್‌ಗಳನ್ನು ಆಪ್ತರಿಗೆ, ಮಕ್ಕಳಿಗೆ ನೀಡುವ ಬದಲು 'ಅಂಜೂರ ರೋಲ್' ಅನ್ನು ನೀಡಬಹುದಾಗಿದೆ. ರಾಜ್ಯದಾದ್ಯಂತ ಬಸ್ ಮೂಲಕ ತಲುಪಿಸುವ ವ್ಯವಸ್ಥೆಯೂ ಇದೆ. ಬೇಕಾದವರು ಪೂಜಾ ರಾಣಿ (6360857248) ಅಥವಾ ಕೆ. ಸುಧಾ (6361016732) ಇವರನ್ನು ಸಂಪರ್ಕಿಸಬಹುದಾಗಿದೆ.

14 ವರ್ಷಗಳಿಂದ ಜನರ ಸುರಕ್ಷತೆಗೆ ಕಾವಲು: ಸಿರವಾರ ಗೃಹ ರಕ್ಷಕ ದಳದ ನಿಸ್ವಾರ್ಥ ಸೇವೆಗೆ ಮೆಚ್ಚುಗೆ

❑ ನೈಜ್ಯ ದೆಸೆ ನ್ಯೂಸ್

ಸಿರವಾರ: ಸಾರ್ವಜನಿಕರ ಸುರಕ್ಷತೆ, ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಕಳೆದ 14 ವರ್ಷಗಳಿಂದ ನಿರಂತರವಾಗಿ ಸೇವೆ ಸಲ್ಲಿಸುತ್ತಿರುವ ಸಿರವಾರದ ಗೃಹ ರಕ್ಷಕ ದಳದ ಸದಸ್ಯರ ಕರ್ತವ್ಯನಿಷ್ಠೆಗೆ ಸಾರ್ವಜನಿಕರಿಂದ ವ್ಯಾಪಕ ಮೆಚ್ಚುಗೆ ವ್ಯಕ್ತವಾಗಿದೆ.



ಸಾಮಾನ್ಯವಾಗಿ ಹಬ್ಬ–ಹರಿದಿನಗಳು, ಜಾತ್ರೆಗಳು, ಧಾರ್ಮಿಕ ಕಾರ್ಯಕ್ರಮಗಳು ಹಾಗೂ ವಿವಿಧ ಸಾರ್ವಜನಿಕ ಸಮಾರಂಭಗಳು ಬಂದಾಗ ಜನರು ಸಂಭ್ರಮದಲ್ಲಿ ಪಾಲ್ಗೊಳ್ಳುತ್ತಾರೆ. ಆದರೆ ಇಂತಹ ಸಂದರ್ಭಗಳಲ್ಲಿ ತಮ್ಮ ವೈಯಕ್ತಿಕ ಸಂತೋಷ, ಕುಟುಂಬದ ಸಮಯ ಹಾಗೂ ಉದ್ಯೋಗದ ಜವಾಬ್ದಾರಿಗಳನ್ನು ಬದಿಗಿಟ್ಟು ಸಾರ್ವಜನಿಕರ ಸುರಕ್ಷತೆಗಾಗಿ ಕರ್ತವ್ಯ ನಿರ್ವಹಿಸುವವರು ಗೃಹ ರಕ್ಷಕ ದಳದ ಸದಸ್ಯರು. ಪೊಲೀಸ್ ಇಲಾಖೆಯೊಂದಿಗೆ ಹೆಗಲಿಗೆ ಹೆಗಲು ಸಿರವಾರ ಪಟ್ಟಣದಲ್ಲಿ ನಡೆಯುವ ದಸರಾ, ಮೊಹರಂ, ಜಾತ್ರೆ, ಚುನಾವಣೆ, ಪ್ರತಿಭಟನೆ, ಮೆರವಣಿಗೆ ಸೇರಿದಂತೆ ವಿವಿಧ ಕಾರ್ಯಕ್ರಮಗಳಲ್ಲಿ ಪೊಲೀಸ್ ಇಲಾಖೆಯೊಂದಿಗೆ ಹೆಗಲಿಗೆ ಹೆಗಲು ಕೊಟ್ಟು ಗೃಹ ರಕ್ಷಕ ದಳದ ಸದಸ್ಯರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಜನಸಂದಣಿ ನಿಯಂತ್ರಿಸುವುದು, ಸಂಚಾರ ವ್ಯವಸ್ಥೆಗೆ ಸಹಕರಿಸುವುದು, ಸಾರ್ವಜನಿಕರಿಗೆ ಅಗತ್ಯ ಮಾರ್ಗದರ್ಶನ ನೀಡುವುದು ಹಾಗೂ ತುರ್ತು ಸಂದರ್ಭಗಳಲ್ಲಿ ಪೊಲೀಸ್ ಇಲಾಖೆಯೊಂದಿಗೆ ಸಮನ್ವಯ ಸಾಧಿಸುವ ಮೂಲಕ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವಲ್ಲಿ ಅವರು ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಕೂಲಿ ಕೆಲಸದ ನಡುವೆಯೂ ಸಾರ್ವಜನಿಕ ಸೇವೆ ಗೃಹ ರಕ್ಷಕ ದಳದ ಬಹುತೇಕ ಸದಸ್ಯರು ತಮ್ಮ ಜೀವನೋಪಾಯಕ್ಕಾಗಿ ವಿವಿಧ ಕೆಲಸಗಳನ್ನು ಅವಲಂಬಿಸಿದ್ದಾರೆ. ಆದ–ರೂ ಕರ್ತವ್ಯಕ್ಕೆ ಕರೆ ಬಂದಾಗ ತಮ್ಮ ವೈಯಕ್ತಿಕ ಕೆಲಸಗಳಿಗೆ ಆದ–ತೆ ನೀಡದೆ ಸಾರ್ವಜನಿಕ ಸೇವೆಗೆ ಹಾಜರಾಗುತ್ತಿರುವುದು ಅವರ ಸೇವಾ ಮನೋಭಾವವನ್ನು ತೋರಿಸುತ್ತದೆ. "ಕರ್ತವ್ಯಕ್ಕೆ ಸಮಯವಿಲ್ಲ, ಸೇವೆಗೆ ಗಡಿ ಇಲ್ಲ" ಎಂಬ ಮನೋಭಾವದೊಂದಿಗೆ ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ಇವರ ಸೇವೆ ಸಮಾಜಕ್ಕೆ ಮಾದರಿಯಾಗಿದೆ ಎಂದು ಸಾರ್ವಜನಿಕರು ಅಭಿಪ್ರಾಯಪಟ್ಟಿದ್ದಾರೆ. ಸಮದ್ ಪಾಷಾ ಅವರ ಮಾರ್ಗದರ್ಶನ ಗೃಹ ರಕ್ಷಕ ದಳದ ಘಟಕಾಧಿಕಾರಿ ಸಮದ್ ಪಾಷಾ ಅವರ ಮಾರ್ಗದರ್ಶನ ಮತ್ತು ನಾಯಕತ್ವದಲ್ಲಿ ತಂಡವು ಶಿಸ್ತುಬದ್ಧವಾಗಿ ಕಾರ್ಯನಿರ್ವಹಿಸುತ್ತಿದೆ. ಕರ್ತವ್ಯದ ಸಂದರ್ಭದಲ್ಲಿ ಸದಸ್ಯರಿಗೆ ಅಗತ್ಯ ಸೂಚನೆ, ಮಾರ್ಗದರ್ಶನ ಹಾಗೂ ಪ್ರೋತ್ಸಾಹ ನೀಡುವ ಮೂಲಕ ತಂಡವನ್ನು ಮುನ್ನಡೆಸುತ್ತಿದ್ದಾರೆ ಎಂದು ಸದಸ್ಯರು ತಿಳಿಸಿದ್ದಾರೆ.

ಜಾಲಹಳ್ಳಿ ಯಲ್ಲಿ ಎನ್‌ಆರ್‌ಬಿಸಿ ಅವೈಜ್ಞಾನಿಕ ವಾರಬಂದಿ ವಿರೋಧಿಸಿ ಬೃಹತ್ ಧರಣಿ ಸತ್ಯಾಗ್ರಹ

❑ ನೈಜ್ಯ ದೆಸೆ ನ್ಯೂಸ್

ಜಾಲಹಳ್ಳಿ: ರಾಯಚೂರು ಜಿಲ್ಲೆ ದೇವದುರ್ಗ ತಾಲೂಕಿನ ಜಾಲಹಳ್ಳಿ ಗ್ರಾಮದಲ್ಲಿ ಎನ್‌ಆರ್‌ಬಿಸಿ (ನಾರಾಯಣಪುರ ಬಲದಂಡೆ ಕಾಲುವೆ) ನೀರು ಪೂರೈಕೆಯಲ್ಲಿ ಜಾರಿಯಲ್ಲಿರುವ ಅವೈಜ್ಞಾನಿಕ ವಾರಬಂದಿ ಪದ್ಧತಿಯನ್ನು ವಿರೋಧಿಸಿ ಹಾಗೂ ರೈತರ ಪಂಪ್‌ಸೆಟ್‌ಗಳಿಗೆ ಸಮರ್ಪಕ ವಿದ್ಯುತ್ ಪೂರೈಕೆ ಮಾಡುವಂತೆ ಒತ್ತಾಯಿಸಿ ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್) ಹಾಗೂ ನೀರು ಬಳಕೆದಾರರ ಸಂಘಗಳ ನೇತೃತ್ವದಲ್ಲಿ ಬುಧವಾರ ಜಾಲಹಳ್ಳಿಯ ಅಂಬೇಡ್ಕರ್ ವೃತ್ತದಲ್ಲಿ ಬೃಹತ್ ಧರಣಿ ಸತ್ಯಾಗ್ರಹ ನಡೆಯಿತು.

ಪ್ರಸ್ತುತ ಜಾರಿಯಲ್ಲಿರುವ 14 ದಿನ ನೀರು ಹರಿಸಿ, 10 ದಿನ ನೀರು ಬಂದ್ ಮಾಡುವ ಪದ್ಧತಿಯನ್ನು ಬದಲಾಯಿಸಿ, 14 ದಿನ ನೀರು ಹರಿಸಿ 7 ದಿನ ಬಂದ್ ಮಾಡುವ ವೈಜ್ಞಾನಿಕ ವಾರಬಂದಿ ಪದ್ಧತಿ ಜಾರಿಗೆ ತರಬೇಕು ಎಂದು ರೈತರು ಒತ್ತಾಯಿಸಿದರು. ಅಲ್ಲದೆ, ಎನ್‌ಆರ್‌ಬಿಸಿ ಕಾಲುವೆಗಳ ಕೊನೆಯ ಭಾಗದ ಜಮೀನುಗಳಿಗೂ ಸಮರ್ಪಕವಾಗಿ ನೀರು ತಲುಪುವಂತೆ ಅಗತ್ಯ ಕ್ರಮ ಕೈಗೊಳ್ಳಬೇಕು.



ಕೊನೆಯ ಭಾಗದ ರೈತರಿಗೆ ನೀರು ಪೂರೈಕೆಯಲ್ಲಿ ಎದುರಾಗುತ್ತಿರುವ ಸಮಸ್ಯೆಗಳನ್ನು ಶಾಶ್ವತವಾಗಿ ಪರಿಹರಿಸಬೇಕು ಎಂದು ಆಗ್ರಹಿಸಿದರು.

ರೈತರ ಪಂಪ್‌ಸೆಟ್‌ಗಳಿಗೆ ಹಗಲು ವೇಳೆಯಲ್ಲಿ 7 ಗಂಟೆಗಳ ಕಾಲ ನಿರಂತರ ಹಾಗೂ ಗುಣಮಟ್ಟದ ವಿದ್ಯುತ್ ಪೂರೈಕೆ ಮಾಡಬೇಕು ಎಂಬ ಬೇಡಿಕೆಯನ್ನು ಮುಂದಿಟ್ಟರು. ಧರಣಿ ಸತ್ಯಾಗ್ರಹವನ್ನು ಉದ್ದೇಶಿಸಿ ಮಾತನಾಡಿದ ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಅಧ್ಯಕ್ಷ ಬಸವಂತರಾಯಗೌಡ, ರೈತರಲ್ಲಿ ಒಗ್ಗಟ್ಟು ಮೂಡದಂತೆ ಜಾತಿ ಆಧಾರಿತ ವಿಭಜನೆಯ ವಾತಾವರಣ ನಿರ್ಮಿಸುವ ಪ್ರಯತ್ನಗಳು ನಡೆಯುತ್ತಿವೆ ಎಂದು ಆರೋಪಿಸಿದರು. ರೈತರ ಹೋರಾಟದಲ್ಲಿ ರೈತರು ಭಾಗವಹಿಸದಂತೆ ಪಿತೂರಿ ನಡೆಯುತ್ತಿದೆ ಎಂದು ಆರೋಪಿಸಿದ ಅವರು, ರೈತರು ಎಚ್ಚೆತ್ತುಕೊಂಡು ತಮ್ಮ ಹಕ್ಕುಗಳಿಗಾಗಿ ಒಗ್ಗಟ್ಟಾಗಿ ಹೋರಾಟ ನಡೆಸಬೇಕು ಎಂದು ಕರೆ ನೀಡಿದರು.

ರೈತರು ರಾಜಕಾರಣಿಗಳನ್ನು ಪ್ರಶ್ನಿಸಬೇಕು ವಿ"ದೇವದುರ್ಗ ತಾಲೂಕಿನ ಕಾಲುವೆಗಳನ್ನು ಸುಧಾರಿಸಿ, ಸರಿಯಾಗಿ ರೈತರ ಹೊಲಗಳಿಗೆ ನೀರು ತಲುಪಬೇಕಾದರೆ ರೈತರು ಈ ಭಾಗದ ರಾಜ–ಕಾರಣಿಗಳನ್ನು ಪ್ರಶ್ನಿಸುವುದನ್ನು ಕಲಿಯಬೇಕು." ? ಕಾಂ. ಶಬ್ಬೀರ್, ರಾಜ್ಯ ಕಾರ್ಮಿಕ ಮುಖಂಡ, ಜಾಲಹಳ್ಳಿಹಿ

ವಾರಬಂದಿ ಅವೈಜ್ಞಾನಿಕ ಪದ್ಧತಿ ವಿ"ಎನ್‌ಆರ್‌ಬಿಸಿ ಕಾಲುವೆಗಳ ವಾರಬಂದಿ ಎಂಬುದೇ ಅವೈಜ್ಞಾನಿಕ ಪದ್ಧತಿಯಾಗಿದೆ. ರೈತರಿಗೆ ಸರಿಯಾಗಿ ನೀರು ನೀಡಲು ತೀರ್ಮಾನ ತೆಗೆದುಕೊಳ್ಳದ ರಾಜಕಾರಣಿಗಳ ಕುತಂತ್ರದ ತೀರ್ಮಾನವೇ ಈ ವಾರಬಂದಿ. ಕೈಗಾರಿಕೆಗಳಿಗೆ ನೀರು ಮಾರಾಟ ಮಾಡುವ ಸಂಚಿನ ಭಾಗವೇ ವಾರಬಂದಿ."

ಕಾಂ. ನರಸಣ್ಣ ನಾಯಕ, ಕೆಪಿಆರ್–ಎಸ್ ಜಿಲ್ಲಾ ಕಾರ್ಯದರ್ಶಿ, ರಾಯಚೂರುಹಿ ಕೆಬಿಜೆಎನ್‌ಎಲ್ ನೀರಾವರಿ ಇಲಾಖೆ ಹಾಗೂ ಜೆಸ್ಕಾಂ ಇಲಾಖೆಯ ಅಧಿಕಾರಿಗಳಿಂದ ಬೇಡಿಕೆಗಳ ಕುರಿತು ಲಿಖಿತ ಭರವಸೆ ಪಡೆದ ಬಳಿಕ ಧರಣಿ ಸತ್ಯಾಗ್ರಹವನ್ನು ಹಿಂಪಡೆಯಲಾಯಿತು. ಧರಣಿಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಅಧ್ಯಕ್ಷ ಬಸವಂತರಾಯಗೌಡ, ಜಿಲ್ಲಾ ಕಾರ್ಯದರ್ಶಿ ನರಸಣ್ಣ ನಾಯಕ, ಕೆಪಿಆರ್‌ಎಸ್ ತಾಲೂಕು ಅಧ್ಯಕ್ಷ ಹನುಮಂತ ಗುರಿಕಾರ, ನೀರು ಬಳಕೆದಾರರ ಸಂಘದ ಅಧ್ಯಕ್ಷ ಶಿವರಾಜ್ ಯಾರಕಮಟ್ಟಿ, ರಾಜ್ಯ ಕಾರ್ಮಿಕ ಮುಖಂಡ ಶಬ್ಬೀರ್ ಜಾಲಹಳ್ಳಿ, ಹನುಮಂತ ಮಡಿವಾಳ, ದುರುಗಪ್ಪ ರಾಮಪಾಳಿ, ಸಾಬಣ್ಣ ಹೂಗಾರ್, ಸಿದ್ದಪ್ಪ ಗುಮೆದಾರ್, ಲಕ್ಕಪ್ಪ ಚಿಂಚೋಡಿ, ಹುಸೇನಪ್ಪ ಗುತ್ತೇದಾರ, ವಾಸು ಮಕಲದೊಡ್ಡಿ, ಮುದೆಪ್ಪ ಪಾಟೀಲ್, ಕರವೇ ಮುಖಂಡ ತಮ್ಮಣ್ಣ ಹೆರುಂಡಿ, ಡಿ.ವೀರೇಂದ್ರಗೌಡ, ರಂಗಪ್ಪ ಮುರಾಳ್, ಬಸವರಾಜ್ ಮಂಡಲಗುಡ್ಡ, ಸಂಜೀವ ರೆಡ್ಡಿ, ವೀರೇಶ್ ಅರಕೇರಾ, ಅಬ್ದುಲ್ ರಹಮಾನ್ ಖುರೇಶಿ, ತಿಮ್ಮಣ್ಣ ಬಂಕಲದೊಡ್ಡಿ ಸೇರಿದಂತೆ ವಿವಿಧ ಗ್ರಾಮಗಳ ನೂರಾರು ರೈತರು, ವಿವಿಧ ರಾಜಕೀಯ ಪಕ್ಷಗಳ ಮುಖಂಡರು ಹಾಗೂ ಸಂಘಟನೆಗಳ ಪದಾಧಿಕಾರಿಗಳು ಭಾಗವಹಿಸಿದ್ದರು.

ವಿಶೇಷ ಆಯುಷ್ ಶಿಬಿರದ ಯಶಸ್ವಿ ಆಯೋಜನೆ!

ಪುರಸಭೆ ಮಾನ್ವಿನಲ್ಲಿ ಉಚಿತ ವಿಶೇಷ ಆಯುಷ್ ಶಿಬಿರವನ್ನು ಯಶಸ್ವಿ

❑ ನೈಜ್ಯ ದೆಸೆ ನ್ಯೂಸ್

ಮಾನ್ವಿ: ನಗರದ ಪುರಸಭೆ ಕಾರ್ಯಾಲಯದ ಆವರಣದಲ್ಲಿ ಜಿಲ್ಲಾ ಆಯುಷ್ ಇಲಾಖೆ ರಾಯಚೂರು ಹಾಗೂ ಸರಕಾರಿ ಯುನಾನಿ ಆಸ್ಪತ್ರೆ ಮಾನ್ವಿ ಇವರ ಸಂಂ–ಯುಕ್ತ ಆಶ್ರಯದಲ್ಲಿ, ರಾಷ್ಟ್ರೀಯ ಆಯುಷ್ ಅಭಿಯಾನ (2026–27) ಯೋಜನೆಯಡಿಯಲ್ಲಿ ಪುರಸಭೆ ನೌಕರರು ಹಾಗೂ ಸಿಬ್ಬಂದಿಗಳಿಗಾಗಿ ಆಯೋಜಿಸಲಾಗಿದ್ದ ವಿಶೇಷ ಉಚಿತ ಆಯುಷ್ ತಪಾಸಣಾ ಮತ್ತು ಚಿಕಿತ್ಸಾ ಶಿಬಿರವು ಮಂಗಳವಾರ (ದಿನಾಂಕ: 29–09–2026) ಅತ್ಯಂತ ಯಶಸ್ವಿಯಾಗಿ ನೆರವೇರಿತು.

ಕಾರ್ಯಕ್ರಮದ ಆರಂಭದಲ್ಲಿ ವೇದಿಕೆಯ ಗಣ್ಯರಿಗೆ ಹೂಗುಚ್ಛದ ಬದಲು ಜ್ಞಾನದ ಸಂಕೇತವಾದ ಪುಸ್ತಕಗಳನ್ನು ನೀಡಿ ಅರ್ಥಪೂರ್ಣವಾಗಿ ಸ್ವಾಗತಿಸಲಾಯಿತು. ಶಿಬಿರದ ಪ್ರಾಸ್ತಾವಿಕ ನುಡಿಗಳನ್ನಾಡಿದ ಜಿಲ್ಲಾ ಆಯುಷ್ ಅಧಿಕಾರಿಗಳಾದ ಡಾ. ಶಂಕರಗೌಡ ಅವರು, "ದೈನಂದಿನ ಒತ್ತಡದ ಬದುಕಿನಲ್ಲಿ ಭಾರತೀಯ ಪುರಾತನ ವೈದ್ಯಕೀಯ ಪದ್ಧತಿಗಳಾದ ಆಯುರ್ವೇದ ಮತ್ತು ಯುನಾನಿ ಪದ್ಧತಿಗಳು ದೈಹಿಕ ಹಾಗೂ ಮಾನಸಿಕ ಸಮತೋಲನ ಕಾಪಾಡಲು ಅತ್ಯಂತ ರಾಮಬಾಣ. ರೋಗ ಬಂದ ಮೇಲೆ ಚಿಕಿತ್ಸೆ



ಪಡೆಯುವುದಕ್ಕಿಂತ, ರೋಗ ಬಾರದಂತೆ ಜೀವನಶೈಲಿ ರೂಪಿಸಿಕೊಳ್ಳುವುದು ಇಂದಿನ ಅಗತ್ಯವಾಗಿದೆ. ಸಾರ್ವಜನಿಕ ಆರೋಗ್ಯ ರಕ್ಷಣೆಯಲ್ಲಿ ಮುಂಚೂಣಿಯಲ್ಲಿರುವ ಪೌರಕಾರ್ಮಿಕರು ಹಾಗೂ ಸ್ಥಳೀಯ ಸಂಸ್ಥೆಗಳ ಸಿಬ್ಬಂದಿಯ ಆರೋಗ್ಯ ಕಾಪಾಡುವುದು ನಮ್ಮ ಆದ್ಯತೆಯಾಗಿದೆ," ಎಂದು ತಿಳಿಸಿದರು.

ಪುರಸಭೆಯ ಪರಿಸರ ಅಭಿಯಂತರರಾದ ಶ್ರೀ ಮಲ್ಲಿಕಾರ್ಜುನ ಅವರು ತಮ್ಮ ಅನಿಸಿಕೆ ವ್ಯಕ್ತಪಡಿಸಿ, "ನಗರದ ಸ್ವಚ್ಛತೆ ಹಾಗೂ ಸಾರ್ವಜನಿಕ ಸೇವೆಯಲ್ಲಿ ಹಗಲಿರುಳು ಶ್ರಮಿಸುವ ಪುರಸಭೆಯ ಎಲ್ಲಾ ವರ್ಗದ ಸಿಬ್ಬಂದಿಗಳಿಗೆ ಇಂತಹ ವಿಶೇಷ ಶಿಬಿರಗಳು ಅತ್ಯಂತ ಉಪಯುಕ್ತವಾಗಿವೆ. ಈ ಶಿಬಿರದ ಮೂಲಕ ನೌಕರರಲ್ಲಿ ಆರೋಗ್ಯದ ಕುರಿತು ಜಾಗೃತಿ ಮೂಡಿಸಿದ ಆಯುಷ್ ಇಲಾಖೆಯ ಕಾರ್ಯ ಶ್ಲಾಘನೀಯ," ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ವೈದ್ಯಾಧಿಕಾರಿ ಡಾ. ಅಮ್ಜದ್ ಶರೀಫ್ ಅವರು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರೂಪಿಸಿ, ಆಯುಷ್ ಪದ್ಧತಿಗಳ ಮಹತ್ವ, ಋತುಮಾನಕ್ಕೆ ತಕ್ಕಂತೆ ರೋಗನಿರೋಧಕ ಶಕ್ತಿ ಹೆಚ್ಚಿಸಿಕೊಳ್ಳುವ ನೈಸರ್ಗಿಕ ಆಹಾರ ಕ್ರಮ ಹಾಗೂ ಆಯುರ್ವೇದ ದಿನಚರ್ಯೆಯ ಬಗ್ಗೆ ವಿಸ್ತಾರವಾಗಿ ಮಾಹಿತಿ ನೀಡಿದರು. ಶಿಬಿರದಲ್ಲಿ ನೂರಾರು ಸಿಬ್ಬಂದಿಗಳಿಗೆ ಸಮಗ್ರ ಆರೋಗ್ಯ ತಪಾಸಣೆ ನಡೆಸಿ ಉಚಿತ ಸಲಹೆ, ಚಿಕಿತ್ಸೆ ನೀಡಲಾಯಿತು. ಶುಶ್ರೂಷಾಧಿಕಾರಿ ಶ್ರೀ ರಾಜಪ್ಪ ಅವರು ನೆರೆದ ಸಿಬ್ಬಂದಿಗಳಿಗೆ ಉಚಿತ ಮಧುಮೇಹ (Diabetes) ಹಾಗೂ ರಕ್ತದೊತ್ತಡ (BP) ಪರೀಕ್ಷೆಗಳನ್ನು ನಡೆಸಿದರು. ವೈದ್ಯಾಧಿಕಾರಿಗಳಾದ ಡಾ. ರಾಜೇಂದ್ರ, ಡಾ. ದುರುಗಪ್ಪ, ಡಾ. ಮೊಹಮ್ಮದ್ ನಬಿ ಮೋಹಿದ್ದಿನ್ ಅವರು ಸಿಬ್ಬಂದಿಗಳನ್ನು ವೈಯಕ್ತಿಕವಾಗಿ ತಪಾಸಣೆ ನಡೆಸಿ, ದೀರ್ಘಕಾಲದ ಕೀಲು ನೋವು, ಅಜೀರ್ಣ, ಉಸಿರಾಟ ಹಾಗೂ ಜೀವನಶೈಲಿ ಸಂಬಂಧಿತ ಕಾಯಿಲೆಗಳಿಗೆ ಸೂಕ್ತ ಆಯುಷ್ ಪದ್ಧತಿಯ ಚಿಕಿತ್ಸಾ ಮಾರ್ಗದರ್ಶನ ನೀಡಿದರು.

ತಪಾಸಣೆಗೊಳಗಾದ ಫಲಾನುಭವಿಗಳಿಗೆ ಫಾರ್ಮಸಿ ಅಧಿಕಾರಿಗಳಾದ ಶ್ರೀ ಭಾರ್ಗವ ಹಾಗೂ ಶ್ರೀಮತಿ



ಸುಧಾ ಬಿ. ಅವರು ರೋಗನಿರೋಧಕ ಮತ್ತು ಅಗತ್ಯ ಆಯುಷ್ ಔಷಧಗಳನ್ನು ಉಚಿತವಾಗಿ ವಿತರಿಸಿದರು. ವೇದಿಕೆಯಲ್ಲಿ ಪುರಸಭೆ ಮುಖ್ಯಾಧಿಕಾರಿಗಳಾದ ಶ್ರೀ ಪರಶುರಾಮ್ ಬಿ. ದೇವಮನೆ, ಪರಿಸರ ಅಭಿಯಂತರರಾದ ಶ್ರೀ ಮಲ್ಲಿಕಾರ್ಜುನ್, ಕಿರಿಯ ಆರೋಗ್ಯ ನಿರೀಕ್ಷಕರಾದ ಶ್ರೀ ಮಹೇಶ್ ಕುಮಾರ್, ಐಟಿ ಇಂಜಿನಿಯರ್ ಶ್ರೀ ಸೈಯದ್ ನಿಯಾಜುದ್ದೀನ್ ಉಪಸ್ಥಿತರಿದ್ದರು. ಕಾರ್ಯಕ್ರಮದ ಯಶಸ್ವಿ ಆಯೋಜನೆಗೆ ಪುರಸಭೆಯ ಅಕೌಂಟೆಂಟ್ ಶ್ರೀ ವೆಂಕಟೇಶ್, ಸಿಬ್ಬಂದಿಗಳಾದ ಸೈದಪ್ಪ ಇನಾಮ್ದಾರ್, ವಿಶ್ವನಾಥ, ಶ್ರೀಮತಿ ಹೇಮಾವತಿ, ದೇವರಾಜ ಮತ್ತು ರಾಚಪ್ಪ ಸೇರಿದಂತೆ ಪುರಸಭೆಯ ಎಲ್ಲಾ ಸಿಬ್ಬಂದಿಗಳು ಸಂಪೂರ್ಣ ಸಹಕಾರ ನೀಡಿದರು. ಶಿಬಿರದಲ್ಲಿ ಭಾಗವಹಿಸಿದ ಸಿಬ್ಬಂದಿಗಳು ಆಯುಷ್ ಇಲಾಖೆ ಹಾಗೂ ಆಸ್ಪತ್ರೆಯ ವೈದ್ಯಕೀಯ ತಂಡಕ್ಕೆ ಕೃತಜ್ಞತೆ ಸಲ್ಲಿಸಿದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101